ವಾರದ ಮುಂಗಾರು

23–6–1985
ಭಾನುವಾರ

ರಬ್ಬರಿನ ಮೂಲ ಗುಣ ಬೇಗನೆ ಗಟ್ಟಿಯಾಗುವುದು ಮತ್ತು ಅಂಟಿಕೊಳ್ಳುವುದು. ಸುಳ್ಯ ಮತ್ತು ಪುತ್ತೂರು ತಾಲೂಕುಗಳನ್ನು ಗಟ್ಟಿಯಾಗಿ ಅಂಟಿಕೊಂಡ ರಬ್ಬರ್ ಬೆಳೆ ಇಲ್ಲಿ ಆಳವಾಗಿ ಬೇರು ಬಿಡುತ್ತಿದೆ. ವಿವೇಚನಾರಹಿತ ಅರಣ್ಯ ನಾಶದಿಂದ ಭವಿಷ್ಯದ ಬಗ್ಗೆ ಆತಂಕಗೊಂಡಿರುವ ಮನುಷ್ಯನಿಗೆ ಬೋಳು ಗುಡ್ಡಗಳನ್ನು ತುಂಬಿಕೊಂಡ ರಬ್ಬರ್ ಸಿರಿಯ ಹಸಿರು ಅರಣ್ಯಗಳು ಸಮಾಧಾನ ಹೇಳುತ್ತಿವೆ.

ದಿನೇಶ್ ಅಮಿನ್ ಮಟ್ಟು
ಚಿತ್ರ: ಕೈಂತಜೆ ರಾಮಕೃಷ್ಣ ಭಟ್ಟ.

ವಾರದ ಚಿತ್ರ

ಈ ದಾರಿ ಬಲು ದೂರ

ಚಿತ್ರ: ಕೇಶವ ವಿಟ್ಲ

ಶ್ಯಾಮಣ್ಣನ ಹಸುರು ಹೊನ್ನು... ರಬ್ಬರ್

ಸುಳ್ಯ ಮತ್ತು ಪುತ್ತೂರು ತಾಲೂಕುಗಳೆರಡನ್ನೂ ಗಟ್ಟಿಯಾಗಿ ಅಂಟಿಕೊಂಡ ರಬ್ಬರ್ ಕೃಷಿ ಅಲ್ಲಿನ ಕಡಿದಾದ ಬೋಳು ಗುಡ್ಡೆಗಳನ್ನೆಲ್ಲಾ ತುಂಬಿಕೊಂಡು ಭದ್ರವಾಗಿ ಬೇರು ಬಿಡುತ್ತಿದೆ.

1961ರಲ್ಲಿ ಕೇಂದ್ರ ಕೃಷಿ ಇಲಾಖೆಯ ಪೈಲಟ್ ಯೋಜನೆಯನ್ವಯ ಕರ್ನಾಟಕದಲ್ಲಿಯೇ ಮೊದಲ ಬಾರಿಗೆ ಸುಳ್ಯದ ಸುಮಾರು 15 ಎಕರೆ ಪ್ರದೇಶದಲ್ಲಿ ರಬ್ಬರ್ ಕೃಷಿಯನ್ನು ಪ್ರಾರಂಭಿಸಲಾಗಿದ್ದರೂ ಇದು ಬೃಹತ್ ಪ್ರಮಾಣದ ಹೊಸ ಆಯಾಮ ಪಡೆದದ್ದು 1964 ರಲ್ಲಿ.

ಶ್ರೀಲಂಕಾದಲ್ಲಿನ ಭಾರತೀಯ ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವ ಉದ್ದೇಶದಿಂದ 1964ರಲ್ಲಿ ಭಾರತ ಮತ್ತು ಶ್ರೀಲಂಕಾದ ನಡುವೆ ನಡೆದ ಒಪ್ಪಂದದಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲೂಕುಗಳಲ್ಲಿ ರಬ್ಬರ್‌ಕೃಷಿಯನ್ನು ಪ್ರಾರಂಭಿಸಲಾಯಿತು.

ಈ ಕೃಷಿಯಲ್ಲಿನ ಲಾಭದ ಪ್ರಮಾಣವನ್ನು ಗುರುತಿಸಿದ ಸರ್ಕಾರ ಮುಂದಿನ ವರ್ಷಗಳಲ್ಲಿ ರಬ್ಬರ್ ಕೃಷಿಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿತಲ್ಲದೆ ರಬ್ಬರ್ ಮಂಡಳಿ ಮತ್ತು ಕರ್ನಾಟಕ ಅರಣ್ಯ ಇಲಾಖೆ ಜಂಟಿ ಸಮೀಕ್ಷೆ ನಡೆಸಿ ರಬ್ಬರ್ ಬೆಳೆಗೆ ಯೋಗ್ಯವೆಂದು ಕಂಡು ಬಂದ 13,000 ಎಕರೆ ಪ್ರದೇಶವನ್ನು ಗುರುತಿಸಿ ಶಿಫಾರಸು ಮಾಡಿತು.

ಭಾರತ ಮತ್ತು ಶ್ರೀಲಂಕಾದ ನಡುವಿನ ಒಪ್ಪಂದದಂತೆ ಶ್ರೀಲಂಕಾದಲ್ಲಿನ ಭಾರತೀಯ ನಿರಾಶ್ರಿತರಿಗೆ ರಬ್ಬರ್ ಕೃಷಿಯ ಮೂಲಕ ಆಶ್ರಯ ಕಲ್ಪಿಸಲು ನಿರ್ಧರಿಸಿದ ಸರ್ಕಾರ ರಬ್ಬರ್ ಕೃಷಿ ಭೂಮಿಯ ಪ್ರಮಾಣವನ್ನು ಹೆಚ್ಚಿಸಿತು. ಈ ಯೋಜನೆಗೆ ಅಗತ್ಯವಾದ ಹಣವನ್ನು ಕೇಂದ್ರ ಸರ್ಕಾರ 25 ವರ್ಷಗಳೊಳಗೆ ಶೇಕಡ ಐದುವರೆ ಬಡ್ಡಿದರದೊಂದಿಗೆ ಹಿಂತಿರುಗಿಸುವ ನಿರ್ಬಂಧದ ಆಧಾರದ ಮೇಲೆ ರಾಜ್ಯ ಸರ್ಕಾರಕ್ಕೆ ನೀಡಿತು.

ರಾಜ್ಯ ಸರ್ಕಾರದ ನೇರ ನಿಯಂತ್ರಣಕ್ಕೆ ಒಳಪಟ್ಟಿದ್ದ ರಬ್ಬರ್ ಕೃಷಿಯನ್ನು ಸುಗಮ ಕಾರ್ಯ ನಿರ್ವಹಣೆಯ ಉದ್ದೇಶದಿಂದ 1980 ಸೆಪ್ಟೆಂಬರ್ 1 ರಂದು ಅರಣ್ಯ ಕೃಷಿ ನಿಗಮಕ್ಕೆ ವಹಿಸಿಕೊಡಲಾಯಿತು. 1981ರ ಜುಲೈ ತಿಂಗಳಲ್ಲಿ 11,107.30 ಎಕರೆ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡು ನಿಗಮ ರಬ್ಬರ್ ಮಂಡಳಿಯ ಅಂಗೀಕೃತ ಯೋಜನೆಯ ಪ್ರಕಾರ ಕಾರ್ಯನಿರ್ವಹಿಸುತ್ತಿದೆ.

ನಿಗಮ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದ ಮೊದಲ ಹಂತದಲ್ಲಿ ಮಾಡಿದ ಪ್ರಥಮ ಕೆಲಸವೆಂದರೆ ಪ್ಲಾಂಟೇಷನ್ ತಜ್ಞರ ಸಹಾಯದಿಂದ ನಷ್ಟದಾಯಕ ರಬ್ಬರ್ ತೋಟಗಳನ್ನು ನಾಶಗೊಳಿಸಿದ್ದು. ಈ ಯೋಜನೆಯ ಪ್ರಕಾರ ಸುಬ್ರಹ್ಮಣ್ಯ ವಿಭಾಗದ ಸುಮಾರು 4,098 ಎಕರೆ ರಬರ್ ತೋಟವನ್ನು ಕಿತ್ತುಹಾಕಲಾಯಿತು. ಈ ತೋಟಗಳೆಲ್ಲಾ ಎಕರೆಗೆ ಕೇವಲ 250 ರಷ್ಟಿದ್ದ 1,368.42 ಎಕರೆ ಪ್ರದೇಶದಲ್ಲಿದ್ದ ಅಧಿಕ ಇಳುವರಿ ತಳಿಯಾದ ಆರ್ ಆರ್‌ಐಎಮ್ ರಬ್ಬರ್ ಮರಗಳನ್ನು ನಾಶಗೊಳಿಸಲಾಗಿದೆ. ಕರ್ನಾಟಕ ರಾಜ್ಯ ಪ್ಲಾಂಟೇಷನ್ ನಿಗಮ ಸುಳ್ಯ ಐವರ್ನಾಡು ಮತ್ತು ಸುಬ್ರಹ್ಮಣ್ಯ ಈ ಮೂರು ವಿಭಾಗಗಳಲ್ಲಿಯೂ ರಬ್ಬರ್ ಕೃಷಿ ತೋಟಗಳನ್ನು ಪ್ರಾರಂಭಿಸಿದ್ದು ಇವುಗಳು ಅಭಿವೃದ್ಧಿಯ ಹಂತದಲ್ಲಿದೆ.

ಸುಳ್ಯ ರಬ್ಬರ್ ವಿಭಾಗದಲ್ಲಿ 1346.66 ಹೆಕ್ಟೇರ್ ವಿಸ್ತಾರದಲ್ಲಿ ರಬ್ಬರ್ ತೋಟವಿದ್ದು ಇದರಲ್ಲಿ 3,74,143 ರಬ್ಬರ್ ಮರಗಳಿವೆ. ಇದರಲ್ಲಿ ಹಾಲು ಸಂಗ್ರಹಯೋಗ್ಯ ಮರಗಳು 3,60,098. 730 ಹಾಲು ಸಂಗ್ರಾಹಕರು ಈ ತೋಟದಲ್ಲಿ ಕೆಲಸವನ್ನು ಮಾಡುತ್ತಿದ್ದು ಒಟ್ಟು 369 ಶ್ರೀಲಂಕ ನಿರ್ವಸಿತ ಕುಟುಂಬಗಳಿಗೆಆಶ್ರಯ ಕಲ್ಪಿಸಲಾಗಿದೆ. ಕಳೆದ ಹಣಕಾಸಿನ ವರ್ಷದಲ್ಲಿ ಈ ವಿಭಾಗದಲ್ಲಿನ 12,60,000 ಲೀಟರುಗಳಷ್ಟು ರಬ್ಬರ್ ಹಾಲನ್ನು ಉತ್ಪಾದಿಸಲಾಗಿದ್ದು, ಈ ಅವಧಿಯಲ್ಲಿ 96 ಲಕ್ಷ ರೂಪಾಯಿಗಳಷ್ಟು ಲಾಭಗಳಿಸಲಾಗಿದೆ ಎಂದು ವಿಭಾಗೀಯ ಕಾರ್ಯನಿರ್ವಾಹಕರಾದ ಕೆ.ಸಿ. ಸುಬ್ಬಯ್ಯ ಹೇಳುತ್ತಾರೆ.

ಐವರ್ನಾಡು ರಬ್ಬರ್ ತೋಟದಲ್ಲಿ ಒಟ್ಟು 3,24,625 ಮರಗಳಿದ್ದು ಇದರಲ್ಲಿ ಪ್ರಸಕ್ತ ಹಾಲು ಸಂಗ್ರಹಯೋಗ್ಯ ಮರಗಳು 3,20,000. 659 ಹಾಲು ಸಂಗ್ರಾಹಕರು ಈ ತೋಟದಲ್ಲಿ ದುಡಿಯುತ್ತಿದ್ದು ಒಟ್ಟು 370 ಶ್ರೀಲಂಕಾ ನಿರ್ವಸಿತ ಕುಟುಂಬಗಳಿಗೆ ಈ ವಿಭಾಗದಲ್ಲಿ ಆಶ್ರಯ ಕಲ್ಪಿಸಲಾಗಿದ್ದು 1984–85ರ ವರ್ಷದ ಅವಧಿಯಲ್ಲಿ 30 ಲಕ್ಷ ರೂಪಾಯಿಗಳಷ್ಟು ಲಾಭಗಳಿಸಿದೆ ಎನ್ನುತ್ತಾರೆ ಐವರ್ನಾಡು ರಬ್ಬರು ವಿಭಾಗದ ವಿಭಾಗೀಯ ಕಾರ್ಯನಿರ್ವಾಹಕರಾದ ಸಿ. ಟಿ. ಕಾಶಿ ಅವರು.

ಸುಳ್ಯ ಐವರ್ನಾಡು ಮತ್ತು ಸುಬ್ರಹ್ಮಣ್ಯಗಳಲ್ಲಿ 1974ರ ನಂತರದ ವರ್ಷಗಳಲ್ಲಿ ಯಾವ ಹೊಸ ರಬ್ಬರು ಸಸಿಗಳನ್ನು ನಾಟಿ ಮಾಡಿಲ್ಲ. ಪ್ರಸ್ತುತ ಈ ಮೂರು ವಿಭಾಗಗಳಲ್ಲಿನ ತೋಟಗಳ ಎಲ್ಲ ಮರಗಳು ಹಾಲು ಸಂಗ್ರಹಕ್ಕೆ ಯೋಗ್ಯವಾಗಿದೆ. ಪ್ರಸಕ್ತ ವರ್ಷದಿಂದ ಸುಬ್ರಹ್ಮಣ್ಯ ವಿಭಾಗದಲ್ಲಿ ಹೊಸ ರಬ್ಬರು ಸಸಿಗಳ ನಾಟಿ ಮಾಡುವ ಯೋಜನೆಯಿದ್ದು ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ಎರಡು ಸಾವಿರ ಎಕರೆ ಪ್ರದೇಶದಲ್ಲಿ ರಬ್ಬರು ಸಸಿಗಳನ್ನು ನೆಡಲಾಗುವುದು ಎಂದು ಕೆ. ಸಿ. ಸುಬ್ಬಯ್ಯ ಹೇಳಿದರು.

ರಬ್ಬರ್ ಮರ

ರಬ್ಬರು ಸಸಿಗಳು ನಾಟಿ ಮಾಡಿದ ಸುಮಾರು ಏಳು ವರ್ಷಗಳ ನಂತರ ಹಾಲು ಸಂಗ್ರಹಕ್ಕೆ ಯೋಗ್ಯವೆನಿಸುತ್ತದೆ. ಆ ಸಮಯದಲ್ಲಿ ಅವುಗಳು ಸುಮಾರು 125 ಸೆಂಟಿಮೀಟರ್ ಎತ್ತರ ಮತ್ತು 50 ಸೆಂಟಿಮೀಟರ್ ಸುತ್ತಳತೆಯ ಮರಗಳಾಗಿ ಬೆಳೆಯುತ್ತದೆ. ಭಾರತದಲ್ಲಿ ಹೊಸ ರಬ್ಬರ್ ಮರಗಳಿಂದ ಹಾಲು ಸಂಗ್ರಹ ಪ್ರಾರಂಭಿಸಲು ಮಾರ್ಚ್ ತಿಂಗಳು ಸೂಕ್ತ ಸಮಯವೆನ್ನಲಾಗಿದೆ.

ತನ್ನ ಏಳನೇ ವರ್ಷದಿಂದ ಮುಂದಿನ 25 ವರ್ಷಗಳ ಕಾಲ ನಿರಂತರವಾಗಿ ಹಾಲು ನೀಡುವ ರಬ್ಬರು ಮರಗಳು ಕ್ರಮೇಣ ಹಾಲಿನ ಸಾಮರ್ಥ್ಯ ಕಳೆದುಕೊಳ್ಳುತ್ತದೆ. ನಂತರ ಅವುಗಳಿಂದ ವ್ಯಾಪಕವಾಗಿ ವಿವಿಧ ಭಾಗಗಳನ್ನು ಸುಲಿದು ಹಾಲು ಸಂಗ್ರಹಿಸಿ ಸಾಯಿಸಲಾಗುತ್ತದೆ. ಸತ್ತ ರಬ್ಬರ್ ಮರಗಳು ಸೌದೆಗೆ ಮುಖ್ಯವಾಗಿ ಮರದ ಪೆಟ್ಟಿಗೆಗಳ ತಯಾರಿಕೆಗೆ ಬಳಸಲ್ಪಡುತ್ತದೆ.

1970ರವರೆಗೂ ದಕ್ಷಿಣ ಕನ್ನಡದಲ್ಲಿ

ಟಿಜೆಐಆರ್ ಎಂಬ ಸ್ಥಳೀಯ ಸಾಂಪ್ರದಾಯಿಕ ತಳಿಯನ್ನು ಬೆಳೆಯುತ್ತಿದ್ದು ಇತ್ತೀಚೆಗಷ್ಟೇ ಸುಧಾರಿತ ತಳಿಯಾದ ಆರ್ ಆರ್. ಐ. ಎಮ್ (ರೀಜನಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಮಲೇಷಿಯಾ) ತಳಿಯನ್ನು ಇಲ್ಲಿ ಕೃಷಿ ಮಾಡಲಾಗುತ್ತಿದೆ.

ಸುಧಾರಿತ ತಳಿ

ಈಗ ಕಸಿಮಾಡಿದ ರಬ್ಬರ್ ಸಸಿಗಳನ್ನೇ ನೆಡಲಾಗುತ್ತಿದ್ದು, ಸಾಮಾನ್ಯವಾಗಿ ಹೆಕ್ಟೇರಿಗೆ 450 ಸಸಿಗಳನ್ನು ನೆಡಲಾಗುತ್ತದೆ. ನಾಟಿಯ ಮೊದಲು ಸೂಕ್ತ ಸ್ಥಳಗಳನ್ನು ಆರಿಸಿಕೊಂಡು ಮರ-ಪೊದೆಗಳನ್ನು ಸವರಿ ಹಾಕಬೇಕು. ಆನಂತರ ಗಿಡ ನೆಡುವ ಸಾಲುಗಳನ್ನು ಗುರುತಿಸಿ ಸಾಧಾರಣ ಎರಡು ಮೀಟರ್ ಅಗಲದ ಸಮತಟ್ಟುಗಳನ್ನು ಮಾಡಲಾಗುತ್ತದೆ. ಈ ಸಮತಟ್ಟುಗಳ ಸಾಲಿನಲ್ಲಿ ಸುಮಾರು ತಲಾ 11 ಅಡಿಗಳ ಅಂತರದಲ್ಲಿ ಗುಂಡಿ ತೋಡಿ ಸಸಿಗಳನ್ನು ನೆಡಲಾಗುವುದು. ಪ್ರತಿಸಾಲುಗಳ ನಡುವಿನ ಅಂತರ 22 ಅಡಿಗಳು. ಪ್ರಾರಂಭಿಕ ವರ್ಷಗಳಲ್ಲಿ ಆಗುವ ಸಸಿಗಳ ಸಾವನ್ನು ತಪ್ಪಿಸಲು ಪ್ಲಾಸ್ಟಿಕ್ ಚೀಲಗಳಲ್ಲಿ ಒಂದು ವರ್ಷದವರೆಗೆ ಚೆನ್ನಾಗಿ ಸಾಕಿ ಬೆಳೆಸಿದ ನಂತರ ಅವುಗಳನ್ನು ಮಣ್ಣಿನಲ್ಲಿ ನಾಟಿ ಮಾಡುವ ಕ್ರಮ ಇತ್ತೀಚೆಗೆ ಬಳಕೆಯಲ್ಲಿದೆ.

ಹಾಲು ಸಂಗ್ರಹಣೆ

ರಬ್ಬರು ಮರಗಳಿಂದ ಎರಡು ದಿನಗಳಿಗೆ ಒಂದು ಬಾರಿಯಂತೆ ಹಾಲು ಸಂಗ್ರಹಿಸಲಾಗುತ್ತದೆ. ಪ್ರತಿಯೊಬ್ಬ ಹಾಲು ಸಂಗ್ರಾಹಕನಿಗೂ 240 ಮರಗಳಿರುವ ಎರಡು ವಿಭಾಗಗಳನ್ನು ನೀಡಲಾಗುತ್ತಿದ್ದು ಆತ ಎರಡು ದಿನಕ್ಕೊಂದು ಬಾರಿ ತನ್ನ ವಿಭಾಗದ 240 ಮರಗಳ ಹಾಲುಸಂಗ್ರಹಿಸುತ್ತಾನೆ.

ಮುಂಜಾನೆಯ ಹೊತ್ತು ಹಾಲು ಸಂಗ್ರಹಕ್ಕೆ ಸೂಕ್ತ ಸಮಯವಾಗಿದ್ದು ಬೆಳಿಗ್ಗೆ 6ಗಂಟೆಯ ಹೊತ್ತಿಗೆ ಆರಂಭವಾಗುವ ಈ ಕೆಲಸ 8-9 ಗಂಟೆಯ ಸುಮಾರಿಗೆ ಕೊನೆಗೊಳ್ಳುತ್ತದೆ. ಹಾಲು ಸಂಗ್ರಾಹಕರು ಒಂದು ನಿಶ್ಚಿತ ಕೋನದಲ್ಲಿ (30°) ಮರದ ಹೊರ ಸಿಪ್ಪೆಯನ್ನು ಹಾಲು ಸುರಿದು ಹೋಗಲು ಅನುಕೂಲವಾಗುವಂತೆ ಕೊರೆಯುತ್ತಾರೆ. ಭಾರತದಲ್ಲಿ ಹಾಲು ಸಂಗ್ರಹಕ್ಕಾಗಿ ಸಾಮಾನ್ಯವಾಗಿ "ಮೈಕೆಲ್ ಗೋಜ್ವೇಜ್ ಚೂರಿ" ಯನ್ನು ಬಳಸಲಾಗುತ್ತಿದೆ. ಸಿಪ್ಪೆ ಗೀರಿದ ಕ್ಷಣ ಹರಿಯಲಾರಂಭಿಸುವ ಹಾಲನ್ನು ಸಂಗ್ರಹಿಸಲು ತೆಂಗಿನ ಮರದ ಗೆರಟೆಗಳನ್ನು ಮರಕ್ಕೆ ಸಿಕ್ಕಿಸಲಾಗುತ್ತದೆ.

ಹಾಲು ಸಂಗ್ರಾಹಕ ಪ್ರಥಮವಾಗಿ ತನ್ನ ವಿಭಾಗದಲ್ಲಿನ ಎಲ್ಲ 240 ಮರಗಳ ಸಿಪ್ಪೆ ಸುಲಿದ ನಂತರ ಕ್ರಮವಾಗಿ ಗೆರಟೆಗಳಲ್ಲಿ ಶೇಖರವಾದ ಹಾಲನ್ನು ಸಂಗ್ರಹಿಸುತ್ತಾನೆ.

ರಬ್ಬರ್ ಮರಗಳಲ್ಲಿ ಹಾಲಿನ ಮೂಲ ಕ್ಯಾಂಬಿಯಂ ಎಂಬ ಒಳಭಾಗದಲ್ಲಿರುತ್ತದೆ. ಒಳಗಿನ ಕಾಂಡ ಮತ್ತು ಹೊರತೊಗಟೆಯ ನಡುವಿನ ಭಾಗವೇ ಕ್ಯಾಂಬಿಯಂ. ಇಲ್ಲಿನ ಹಾಲಿನ ನಾಳಗಳ ಜಾಲ ಹರಡಿರುತ್ತದೆ.

ರಬ್ಬರ್ ಹಾಲಿಗೆ ಲ್ಯಾಟೆಕ್ಸ್ ಎಂದು ಕರೆಯಲಾಗುತ್ತಿದ್ದು ಇದರಲ್ಲಿ ಶೇಕಡ 33 ರಷ್ಟು ರಬ್ಬರ್ (ಹೈಡ್ರೊಕಾರ್ಬನ್) ಇರುತ್ತದೆ. ತೋಟಗಳಲ್ಲಿ ಸಂಗ್ರಹಿಸಿದ ರಬ್ಬರ್ ಹಾಲನ್ನು ನಂತರ ಟ್ಯಾಂಕರ್‌ಗಳಲ್ಲಿ ತುಂಬಿಸಿ ಸಂಸ್ಕರಣ ಕೇಂದ್ರಕ್ಕೆ ಕಳುಹಿಸಲಾಗುತ್ತದೆ.

(ಮೂರನೆ ಪುಟಕ್ಕೆ)

ಸೆಂಟ್ರಿಫ್ಯೂಜಲ್ಯಾಟೆಕ್ಸ್ ಸಂಸ್ಕರಣಾ ಕೇಂದ್ರ

ಸುಳ್ಯ ಐವರ್ನಾಡು ಮತ್ತು ಸುಬ್ರಹ್ಮಣ್ಯ ಈ ಮೂರು ರಬ್ಬರ್ ವಿಭಾಗಗಳಿಗೂ ಇರುವ ಏಕೈಕ ರಬ್ಬರ್ ಸಂಸ್ಕರಣ ಕೇಂದ್ರ ಸುಳ್ಯದ ಮೇದಿನಡ್ಕದಲ್ಲಿದೆ. ಇಲ್ಲಿ ಸುಮಾರು 15 ಲಕ್ಷ ರೂಪಾಯಿ ಮೌಲ್ಯದ ಸೆಂಟ್ರಿಫ್ಯೂಜ್ ಲ್ಯಾಟೆಕ್ಸ್ ಯಂತ್ರವಿದೆ. ಈ ಕೇಂದ್ರಕ್ಕೆ ಪ್ರತಿದಿನ ಮೂರು ರಬ್ಬರ್ ವಿಭಾಗಗಳಿಂದ ಸುಮಾರು 2,000 ಲೀಟರ್ ರಬ್ಬರ್ ಹಾಲು ಪೂರೈಕೆಯಾಗುತ್ತದೆ.

ರಬ್ಬರ್ ಮರದಿಂದ ಶೇಖರಿಸಲಾಗುವ ಹಾಲಿನಲ್ಲಿ ಒಣ ರಬ್ಬರಿನ ಅಂಶ ಶೇಕಡ 33ರಷ್ಟಿದ್ದು ಸಂಸ್ಕರಣ ಹಂತದಲ್ಲಿ ಇದಕ್ಕೆ ಅಮೋನಿಯಾ ಸೇರಿಸಿ ಅದನ್ನು ಶೇಕಡ 66ಕ್ಕೆ ಹೆಚ್ಚಿಸಲಾಗುವುದು.

ಪ್ರತಿದಿನ ಈ ಸಂಸ್ಕರಣಾ ಕೇಂದ್ರದಲ್ಲಿ 10,000 ಲೀಟರ್‌ಗಳಷ್ಟು ಶುದ್ಧೀಕೃತ ರಬ್ಬರನ್ನು ತಯಾರಿಸಲಾಗುವುದು. ಬ್ಯಾಕ್ಟೀರಿಯಾ ಕ್ರಿಯೆಯಿಂದ ಹಾಳಾಗುವುದನ್ನು ತಪ್ಪಿಸಲು ಅದಕ್ಕೆ ಹಲವು ರಾಸಾಯನಿಕ ಪದಾರ್ಥಗಳನ್ನು ಸೇರಿಸಿ ಬ್ಯಾರಲ್‌ಗಳಲ್ಲಿ ಸಂಗ್ರಹಿಸಲಾಗುವುದು. ಪ್ರತಿದಿನ ಈ ಕೇಂದ್ರದಲ್ಲಿ ತಲಾ 200 ಲೀಟರ್ ಸಾಮರ್ಥ್ಯದ ಸುಮಾರು 50 ಬ್ಯಾರಲ್ ಶುದ್ಧೀಕೃತ ರಬ್ಬರ್ ಹಾಲುಗಳನ್ನು ಉತ್ಪಾದಿಸಲಾಗುವುದು ಎನ್ನುತ್ತಾರೆ ಈ ಕಾರ್ಖಾನೆಯ ತಾಂತ್ರಿಕ ಅಧಿಕಾರಿ ಚಂದ್ರಶೇಖರನ್.

ಮೊದಲ ಸಂಸ್ಕರಣ ಹಂತದಲ್ಲಿ ಸಿಗುವ ಗುಜರಿ ರಬ್ಬರನ್ನು ಮುಂದೆ ವಿವಿಧ ಸಂಸ್ಕರಣಾ ಪ್ರಕ್ರಿಯೆಗಳ ನಂತರ ಕೆಳದರ್ಜೆಯ ರಬ್ಬರ್ ಹಾಳೆಗಳನ್ನಾಗಿ ಪರಿವರ್ತಿಸಿ ವಿಕ್ರಯಿಸಲಾಗುವುದು ಮುಖ್ಯವಾಗಿ ಚಪ್ಪಲಿ ಮತ್ತು ಶೂ ತಯಾರಿಕೆಯಲ್ಲಿ ಇದು ಉಪಯೋಗಿಸಲ್ಪಡುತ್ತದೆಯಂತೆ.

ಈ ಕೇಂದ್ರದಿಂದ ರಬ್ಬರನ್ನು ತಿಂಗಳಿಗೆರಡು ಬಾರಿ ಟೆಂಡರ್ ಕರೆದು ಮಾರಾಟ ಮಾಡಲಾಗುವುದು. ಒಂದು ಕಿಲೋ ರಬ್ಬರು ಸಾಮಾನ್ಯವಾಗಿ 24 ರೂಪಾಯಿಗಳಿಗೆ ಮಾರಾಟವಾಗುತ್ತದೆ. ಇದರಲ್ಲಿನ ಲಾಭಾಂಶ ಪ್ರತಿ ಕಿಲೋಗೆ ಅಂದಾಜು ಆರು ರೂಪಾಯಿಯಾಗಿರುತ್ತದೆ. ಪ್ರಸಕ್ತ ಸಂಸ್ಕರಣಾ ಕಾರ್ಯ ದುಬಾರಿಯಾಗಿದ್ದರೂ ಇದರಲ್ಲಿನ ಲಾಭಾಂಶದ ಪ್ರಮಾಣವು ಅಧಿಕವಾಗಿದೆ ಎನ್ನುತ್ತಾರೆ ಸುಳ್ಯ ವಿಭಾಗದ ನಿರ್ವಾಹಕ ಕೆ. ಸಿ. ಸುಬ್ಬಯ್ಯ.

ಸೆಂಟ್ರಿಫ್ಯೂಜ್ ಸಂಸ್ಕರಣದ ಕೇಂದ್ರವಲ್ಲದೆ ಐವರ್ನಾಡಿನಲ್ಲಿ ಹೊಗೆ ಹಾಳೆಗಳ ಉತ್ಪಾದನಾ ಕಾರ್ಖಾನೆಯೂ ಇದೆ. ಇಲ್ಲಿ ಲ್ಯಾಟೆಕ್ಸ್‌ನಿಂದ ರಬ್ಬರ್ ಹಾಳೆಗಳನ್ನು ತಯಾರಿಸಲಾಗುತ್ತದೆ.

ರಬ್ಬರ್ ಹಾಲನ್ನು ಅಲ್ಯುಮಿನಿಯಂ ಚೌಕಟ್ಟಿನೊಳಗೆ ಸುರಿದು ಹೊಗೆ ಗೂಡಿನಲ್ಲಿಟ್ಟು ಹೊಗೆ ಹಾಯಿಸುವ ಮೂಲಕ ಗಟ್ಟಿಗೊಳಿಸಲಾಗುತ್ತದೆ. ಇಂತಹ ಹಾಳೆಗಳನ್ನು ಮುಖ್ಯವಾಗಿ ಟಯರ್ ಉತ್ಪಾದನೆಗಾಗಿ ಬಳಸಲಾಗುತ್ತಿದೆ.

ಸಾಮಾನ್ಯವಾಗಿ 15 ರೂಪಾಯಿಗೆ ಒಂದು ಕಿಲೋ ಹೊಗೆ ಹಾಳೆ ಮಾರಾಟವಾಗುತ್ತಿದ್ದು ಇದರಿಂದ ಸಿಗುವ ಗರಿಷ್ಠ ಲಾಭ ತಲಾ ಒಂದು ರೂಪಾಯಿ ಎನ್ನುತ್ತಾರೆ ಕೆ. ಸಿ. ಸುಬ್ಬಯ್ಯ. ದಿನಕ್ಕೆ ಸರಾಸರಿ ಆರು ಸಾವಿರ ರೂಪಾಯಿ ನಷ್ಟ ಅನುಭವಿಸುತ್ತಿರುವ ಈ ಕಾರ್ಖಾನೆಯನ್ನು ಮುಚ್ಚುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎನ್ನುತ್ತಾರೆ ಅವರು.

ನಷ್ಟಕ್ಕೆ ಪ್ರಮುಖ ಕಾರಣ ಸೌದೆಯ ಅಭಾವ ಮತ್ತು ಅದರ ದುಬಾರಿ ಕ್ರಯ. ಅಲ್ಲದೆ ಈ ಕಾರ್ಖಾನೆ ಮುಖ್ಯವಾಗಿ ಕಾರ್ಮಿಕ ಶಕ್ತಿಯನ್ನೇ ಅವಲಂಬಿಸಿದ್ದು ಇದು ಕೂಡಾ ಕಾರ್ಖಾನೆಯ ಇಂದಿನ ಸ್ಥಿತಿಗೆ ಕಾರಣವೆಂಬುದು ಅವರ ವಾದ.



ರಬ್ಬರ್ ಬೆಳೆಯ ರೋಚಕ ಇತಿಹಾಸ

ಉಷ್ಣವಲಯದಲ್ಲಿ ಸಾಮಾನ್ಯವಾಗಿ ಕಂಡು ಬರುವ ಯುಫೋರ್ಬಿಯೇಸಿಯೆ ವಂಶಕ್ಕೆ ಸೇರಿದ ಹೆವಿಬ್ರೆಸಿಲಿಯನ್ಸಿಸ್ ಜಾತಿಗೆ ಸೇರಿದ ಸಸ್ಯ ರಬ್ಬರ್, 1876ರಲ್ಲಿ ಹೆನ್ರಿ ವಿಕ್ಹಾಂ ಎಂಬವ ಬ್ರೆಜಿಲ್ ದೇಶದ ಕ್ಯೂಗಾರ್ಡನ್ ಮೂಲಕ ಪ್ರಥಮವಾಗಿ ಇದರ ಬೀಜಗಳನ್ನು ತರಿಸಿಕೊಂಡನೆಂದು ಹೇಳಲಾಗುತ್ತಿದೆ.

ಅಂದಿನಿಂದ ರಶಿಯೊದ ಉಷ್ಣವಲಯದಲ್ಲಿ ವ್ಯಾಪಕವಾಗಿ ಹಬ್ಬಿರುವ ರಬ್ಬರ್ ಪ್ರಮುಖ ವಾಣಿಜ್ಯ ಬೆಳೆಯೆಂಬ ಪ್ರಸಿದ್ಧಿ ಪಡೆದಿದೆ. 20 ಡಿಗ್ರಿಯಿಂದ 35ಡಿಗ್ರಿ ಸೆಂಟಿಗ್ರೇಟ್ ವರೆಗಿನ ಉಷ್ಣತೆ ಮತ್ತು ವರ್ಷವಿಡೀ ವ್ಯಾಪಕವಾಗಿ ಸುರಿಯುವ ಸುಮಾರು 200 ಸೆಂಟಿ ಮೀಟರಿನಷ್ಟು ಮಳೆ ಈ ಬೆಳೆಗೆ ಆವಶ್ಯಕ.

ಬ್ರೆಜಿಲ್ ದೇಶದ ಉಷ್ಣವಲಯದ ಕಾಡುಗಳಿಂದ ಏಷ್ಯಾದ ಉಷ್ಣವಲಯಗಳಿಗೆಲ್ಲಾ ಹಬ್ಬಿದ ರಬ್ಬರ್ ಕೇರಳದ ಮೂಲಕ 1902ರಲ್ಲಿ ಭಾರತಕ್ಕೆ ಪ್ರವೇಶಿಸಿತು. ರಬ್ಬರ್ ಇಲ್ಲಿನ ನೆಲದಲ್ಲಿ ಉತ್ತಮವಾಗಿ ಬೆಳೆದರೂ ಭಾರತೀಯರಿಗೆ ಅದು ಲಾಭದಾಯಕವೆನಿಸಲಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ದೇಶದಲ್ಲಿ ಯಾವುದೇ ರಬ್ಬರ್ ಕೈಗಾರಿಕೆಗಳಿಲ್ಲದ ಕಾರಣ ಕಚ್ಚಾ ಮಾಲ

(ಮೂರನೆ ಪುಟಕ್ಕೆ)

ಸಾಹಿತ್ಯ

ವಾಂಜು ಗಂಗೊಳ್ಳಿ

ಅಂದು ಮಧ್ಯಾಹ್ನದ ವೇಳೆಯಲ್ಲಿ ಮೆಟ್ಟಿಗೆ ಹಿಡಿದು ತೌರುಮನೆಗೆ ಅಡಿ ಇಟ್ಟ ವಿಜಯಳಿಗೆ ತನ್ನ ಒಡ ಹುಟ್ಟಿದವರನ್ನು ಕಂಡೊಡನೆ ಮನದಾಳದಿಂದ ಚಿಮ್ಮಿ ಬರುವ ಶೋಕವನ್ನು ತಡೆಯಲು ಆಗ ಲಿಲ್ಲ. ಕಣ್ಣೀರು ಚಿಮ್ಮಿ ಹೊರಟಿತು.

"ಏನು ನಡೆಯಿತು ವಿಜಯಾ? ಮಾತ ನ್ನಾಡು, ನಡುಗುತ್ತಿದೆ ಕಣೆ...... ವಿಷ ಯವನ್ನಾದರೂ ತಿಳಿಸಿ ಅಳು." ಪಡಿ ಸಾಲಿನಿಂದ ಸಮೀಪಕ್ಕೆ ಬಂದು ಒಡಲನ್ನು ಸವರಿ ಕೇಳಿದಳು ಅಮ್ಮ.

"ಇದಾ ಸ್ವಲ್ಪ ಹೊತ್ತು ಸುಮ್ಮನೆ ಇರು. ಅವಳಾಗಿ ಹೇಳಲಿ" ಅಪ್ಪ ಅಮ್ಮ ನನ್ನು ಗದರಿಸಿದರು.

"ಅಕ್ಕನನ್ನು ಸ್ವಲ್ಪ ಸಮಯ ಹಾಗೆ ಬಿಟ್ಟರೆ ಮತ್ತೆ ಸರಿ ಆಗುತ್ತಾಳೆ ಎಲ್ಲರೂ ಹಾಲಿಗೆ ಹೋಗುವ" ತಂಗಿ ಗೀತ ಹೇಳುತ್ತಾ ಕಾಫಿ ಬಟ್ಟಲು ಹಿಡಿದು ಅತ್ತ ಬಂದಳು.

"ಅಪ್ಪಾ ದೊಡ್ಡವಳು ಬಂದಳಪ್ಪ. ಮಹಾರಾಯತಿ ಯಾಕೆ ಬರೋದಿಲ್ಲಾಂತ ಅಂದು ಕೊಂಡಿದ್ದೆ" ಅಣ್ಣ ಲೇವಡಿಗಾಗಿ ಹೇಳಿದನು.

"ಇನ್ನು ನೀವಿಬ್ಬರೂ ಆರಂಭಿಸಬೇಡಿ"

"ಅಕ್ಕ ತೆಗೋ ಈ ಕಾಫಿನ್ನ ಕುಡಿ. ಎಷ್ಟು ಹೊತ್ತಾಂತ ಹೀಗೆ ಅಳುತ್ತಾ ಇರ್ತಿಯಾ" ಗೀತ ಕಾಫಿಯ ಬಟ್ಟಲನ್ನು ವಿಜಯಳ ಬಳಿಗೆ ನೀಡಿ ದಳು. ಆ ಕಾಫಿಗಾಗಿಯೇ ಅಷ್ಟು ಹೊತ್ತು ಕಾದು ಕುಳಿತಂತೆ ಇದ್ದ ವಿಜಯ ಒಡನೆ ಎದ್ದು ತಂಗಿಯ ಕೈಯಲ್ಲಿದ್ದ ಕಾಫಿಯನ್ನು ತೆಗೆದು ಕೊಂಡು ಗಟ ಗಟನೆ ಬಾಯಿಗೆ ಸುರಿದಳು. ಅದು ಅಷ್ಟು ಬಿಸಿ ಇದ್ದರೂ ಅದರ ಪರಿವೆ ಇರಲಿಲ್ಲ ಆಕೆಗೆ. ಈಗ ಅವಳಿಗೆ ಅಲ್ಪ ಉಸಿರು ಬಂದಂತೆ ಅನಿ ಸಿತು. ತವರು ಮನೆಯವರು ವಿಜಯಾಳ ಬಳಿ ನಡೆದದ್ದು ಏನೆಂದು ಕೇಳಲು ಪ್ರಾರಂಭಿಸಿದರು.

ಅಮ್ಮ ಚೆನ್ನಾಗಿ ಮೋಸ ಹೋದಿರಿ. ಆತ ಬಹಳಾ ಒಳ್ಳೆಯ ಜನವೆಂದು ಲೋಕವೆಲ್ಲಾ ಬಾಯಿಗೆ ಬಾಯಿ ಸೇರಿಸಿ ನೀನೂ ಅಪ್ಪನೂ ದೊಡ್ಡದಾಗಿ ಹೇಳಿ ನನ್ನನ್ನು ಗುಂಡಿಗೆ ತಳ್ಳಿದು ಕೊಂಡೋಗಿ ದೂಡಿದಿರಿ" ಮತ್ತೆ ಪುನಃ ಅಳು ಬರು ವಂತಾಗಿ ಹೇಳಿದಳು. "ವಿಷಯವನ್ನು ತಿಳಿದೆ ಅದೂ ಇದೂಂತ ಹೇಳಿದರೆ ನಮಗೇನು ಗೊತ್ತಾಗುತ್ತೆ" "ಇದಕ್ಕೇಂತ ಕಾರಣ ಇಲ್ಲ ಅಪ್ಪ. ಯಾವುದನ್ನು ಎತ್ತಿ ದರೂ ದೂರು. ಹೆಂಗಸರು ಬೆಳಕಾದ ಮೇಲೆ ಎದ್ದೇಳಬಾರದಂತೆ. ಗಂಡನಿಗೆ ಹಾಕಿದ ಮೇಲೆಯೇ ಊಟ ಮಾಡ ಬೇಕಂತೆ. ಗಂಡನಿಗೆ ಬಡಿಸಿದ ಮೇಲೆಯೇ ಊಟ ಮಾಡಬೇಕಂತೆ. ಹಗಲು ಹೊತ್ತಿ ನಲ್ಲಿ ನಿದ್ರೆ ಮಾಡಬಾರದಂತೆ. ದಿನಂಪ್ರತಿ ಇಲ್ಲವಾದರೂ ಮಂಗಳ, ಶುಕ್ರವಾರ ತಪ್ಪ ದೇ ದೇವಸ್ಥಾನಕ್ಕೆ ಹೋಗಬೇಕಂತೆ ಸಿನೇ ಮಾ ಡ್ರಾಮಾಂತ ಸುತ್ತಾಡಬಾರದಂತೆ ದಿನಂಪ್ರತಿ ಇದೇ ಲಚ್ಚರು"

"ಎಷ್ಟೆ ಪಾಪಿ ಹೇಗೆ ಮುದ್ದಾಗಿ ಬೆಳೆದವಳ ಈ ತರ ತೊಂದರೆ ಕೊಟ್ಟು ಬಿಟ್ಟರೋ" ಅಮ್ಮ ಗೊಣಗಿದಳು.

"ಗಂಡ ಏನನ್ನೂ ಖಂಡಿಸುವುದಿಲ್ಲವಾ" ಅಪ್ಪನ ಪ್ರಶ್ನೆ.

"ಯಾರನ್ನು ಖಂಡಿಸುವುದಿಲ್ಲಾಂತ ಕೇಳ್ತಿದ್ದೀರಿ! ಅವರ ಅಮ್ಮನೊಡನೆ ಸೇರಿ ಕೊಂಡು ನನಗೆ ನರಕ ಕೊಡ್ತಿದ್ದಾರೆ. 'ಅಮ್ಮ ಹೇಳೋದ್ರಲ್ಲಿ ಏನು ತಪ್ಪಿದೇಂತ ಹೀಗೆ ಅಳ್ತಿದ್ದೀಯಾ. ಅವರು 'ಆ ಕಾಲದ ಮನುಷ್ಯರು. ಯಾವುದಾದರೂ ಹೇಳಿ ಕೊಂಡೆ ಇರುವರು. ನೀನು ಕಲಿತವಳು. ಸಹನೆ ಪಡಬೇಕೇದು' ಮತ್ತೆ ನಂಗೆ ಪುಸಲಾಯಿಸುತ್ತಾರೆ"

"ಮುಟ್ಠಾಳ ಹುಡುಗ ಇವನಿಗೆಲ್ಲಾ ಯಾಕೆ ಹೆಂಡತಿ" ಅಣ್ಣ ಹಾರಾಡಿದ. "ಅವತ್ತು ಆದಿತ್ಯವಾರ ಸುಮ್ಮನೆ ಕುಳಿತು ಕೊಂಡು ಪುಸ್ತಕ ಓದಿಕೊಂಡಿದ್ದೆ ಅವರು ಮನೆಯಲ್ಲೇ ಇದ್ದರು. 'ಎಷ್ಟು ದಿನಾಂತ ನಾನು ಕೆಲಸದವಳಾಗಿ ಅಡುಗೆ ಮನೆ ಯೊಳಗೆ ಅಡ್ಡಾಡಿಕೊಂಡು ಇರುವುದು. ಏನೂ ಗೊತ್ತಿಲ್ಲಾಂತ ಇಟ್ಟು ಕೊಂಡಿ ದ್ದರೆ ಆಯ್ತು. ಒಲೆಯ ಹತ್ತಿರ ಬಂದು ನಿಂತು ಕೆಲಸ ಕಲಿತುಕೊಳ್ಳಬೇಕು. ಯಾವು ದರಲ್ಲೂ ಅಕ್ಕರೆ ಬೇಕು. ಉಪ್ಪು ಹುಳಿಗೂ ಪ್ರಯೋಜನವಿಲ್ಲದಂತೆ ಬೆಳೆಸಿ ದ್ದಾರೆ. ನನ್ನ ತಲೇ ಬರಹಾಂತ ತಿದ್ದಿ ದ್ದರೂ ಆಗುತ್ತಿತ್ತು' ಅತ್ತೆ ಬಂದು ಕಿರು ಚಿದರು ನನಗೂ ಸಹಿಸಲಾರದ ಕೋಪ, ಏನು ಹೇಳಿ ಅತ್ತೆ ಆದರೆ ನನ್ನನ್ನು ಸಾಕಿದವರನ್ನು ಮಾತ್ರ ಹೇಳಬೇಡಿ.' ಅಂದೆ"

"ಅದಕ್ಕೆ ಅವಳೇನು ಹೇಳಿದ್ಳು?" ಅಮ್ಮ ಕೇಳಿದಳು.

"ಹಾಗೇ ಹೇಳ್ತಿನಿ ಕಣೇ ಚೆನ್ನಾಗಿ ಸಾಕಿದ್ರೆ ನಾನು ಯಾಕೆ ಬಾಯಿ ಬಡ್ಕೊಳ್ಳಲಿ' ಎಂದರು"

"ಅಷ್ಟೊಂದು ಗರ್ವನ ಅವಳಿಗೆ, ಇರಲಿ ಮಾತನಾಡಿಕೊಳ್ತೀನೆ"

"ಇಷ್ಟೆಲ್ಲಾ ಮಾತನಾಡಿದಳೇ ಏನೊ ಓದಿದ್ದಾನೆ ಹುಡುಗ: ಒಳ್ಳೆ ಉದ್ಯೋಗ ದಲ್ಲಿದ್ದಾನೇಂತ ಮಾತ್ರ ಅವನಿಗೆ ಹೆಣ್ಣು ಕೊಡ್ಲಿಕ್ಕೆ ಒಪ್ಕೊಂಡಿದ್ದು. ಇಷ್ಟೆಲ್ಲಾ ಖರ್ಚುಮಾಡಿ ಕೇವಲ ಒಬ್ಬ ಹುಡುಗ ನಿಗೆ ಕೊಟ್ಟದ್ದಕ್ಕಿಂತಾ ಯಾವುದಾದರು ಗುಂಡಿಗೆ ದೂಡಿರ ಬಹುದಿತ್ತು:"— ಅಪ್ಪ ಗುಡುಗಿದರು.

"ಅಪ್ಪಾ ಈಗಲೇ ಹೋಗಿ ಅವ ನನ್ನು ಎರಡರಲ್ಲಿ ಒಂದು ಮಾಡಿ ಬರ್ತೀನಿ" ಅಣ್ಣ ದುಡುಕಿದ.

"ಇನ್ನು ನಾವು ಅಲ್ಲಿಗೆ ಹೋಗುವು ದರಲ್ಲಿ ಮರ್ಯಾದೆ ಇಲ್ಲ. ಸೊಸೆ ಬೇಕು ಹೆಂಡತಿ ಬೇಕು ಅಂದ್ರೆ ಹುಡುಕಿಕೊಂಡು ಬರ್ತಾರಲ್ಲ. ಆಗ ಮಾತನಾಡಿ ಕೊಂಡರೆ ಆಯ್ತು. ಅಲ್ಲಿಗೆ ನಾವಾಗೇ ಹೋದರೆ ಸಸಾರವಾಗುತ್ತೆ"

"ಅಪ್ಪಾ ಅವರು ಬರ್ತಾರೆಂತ ಅಷ್ಟು ಸುಲಭವಾಗಿ ನೆನೆಯಬೇಡಿ. ನಾನು ಹೊರಟು ಬರುವಾಗ ಹಾಗೆ ಹೇಳಿದರು. 'ಚೆನ್ನಾಗಿ ಯೋಚ್ನೆಮಾಡಿ ಹೊರಡು ನಾನು ಬಂದು ಕರೀತೇನೇಂತ ತಿಳೀಬೇಡ. ಅದು ಈ ಜನ್ಮದಲ್ಲಿ ಮಾತ್ರ ನಡೆಯೋಲ್ಲಾಂತ' ಹೇಳಿದ್ರು"

"ನೀನು ಬಿಸಿ ಬಿಸಿಯಾಗಿ ನಾಲ್ಕು ಮಾತನ್ನು ಕೇಳಬಾರದಿತ್ತೇನೆ ಅಕ್ಕ? ನಮ್ಮಪ್ಪ ಅಮ್ಮ ಏನೂ ಇಲ್ಲದ ಅನಾ ಥರಲ್ಲ ಹಿಂತಿರುಗ ಬರುತ್ತೇನೆಂದು ನೀವು ಕನಸ್ಸು ಕಾಣಬೇಡಿ' ಅಂತ ಹೇಳ ಬಾರ ದಿತ್ತಾ. ನಾನಾಗಿದ್ರೆ, ಸರಿಯಾಗಿ ಉತ್ತರ ಕೊಟ್ಟು ಬರುತ್ತಿದ್ದೆ." ಗೀತ ಆವೇಶ ದಿಂದ ಉರಿದಳು.

"ಹೇಳದೆ ಇದ್ದೇಂತ ತಿಳಿದ್ಯಾ. ಸರಿ ಯಾಗಿ ನಾನು ಹೇಳ್ದೆ. ಅದಕ್ಕೆ, 'ತವರು ಮನೆಯಲ್ಲಿ ವಸತಿಯಿಂದ ಇದ್ದಾರೇಂತ ನಿಂಗೆ ಗರ್ವ. ಅದೆಷ್ಟು ದಿನ ನಿನ್ನ ಕೂರಿಸಿ ಊಟ ಹಾಕ್ತಾರೆ ಅಂತ ನೋಡ್ಕೊ ತ್ತೇನ್' ಅಂದ್ರು" "ಅರೆ ಬುದ್ದಿ ಕೆಟ್ಟ ವನೆ! ಹೀಗೆ ಯಾಕೋ ಕೇಳಿದೆ. ಇಲ್ಲಿ ಯಾರೂ ಸತ್ತು ಹೋಗಲಿಲ್ಲ. ನಾವು ಸಾಯುವವರೆಗೂ ಇಟ್ಟು ಕಾಪಾಡುತ್ತೇನೆ ಕಣೋ. ನಾವು ಸತ್ತು ಹೋದರೂ ಇನ್ನು ತಲೆ ಮಾರಿನ ವರೆಗೂ ಕೂತು ತಿನ್ನಲಿಕ್ಕೆ ಸೊತ್ತು ಇದೆ ಬಡವಾ ಮಗನೇ. ನನ್ನ ತಂಗಿಗೆ ಊಟ ಹಾಕದೆ ತಿರುಗಿ ಕಳುಹಿಸಿ ಬಿಡ್ತಾರೇಂತ ತಿಳಿದ್ಯಾ ಒಂಟಿ ಮಗನೆ!"

ಎದುರಿಗೆ ವಿಜಯಾಳ ಗಂಡ ಇರು ವಂತೆ ಅನಿಸಿ ಬಿಸಿ ಉಸಿರಿನೊಡನೆ ಬೊಬ್ಬಿಟ್ಟ ಅಣ್ಣ.

"ವಿಜಯಾ ನೀನು ಮಾತನಾಡದೆ ಇರಮ್ಮ. ನಿನ್ನ ಎಷ್ಟು ದಿವ್ಸದ ವರೆಗೆ ಕಾಪಾಡುತ್ತಾರೆ ಅಂತ ಕೇಳಿದ್ನೇನು. ಕತ್ತೆ! ಆ ಹುಡುಗನಿಗೆ ಬುದ್ಧಿ ಕಲಿಸು ತ್ತೇನ್" ಅಪ್ಪ ಹಲ್ಲುಗಳನ್ನು ಕಡಿದು ಕೊಂಡರು.

ಬಂದ ನಾಲ್ಕನೇ ದಿನ ಎದ್ದು ನಡೆ ದಾಡಲು ಶುರು ಮಾಡಿದಳು. ಬರಿಯ ಭಾವನೆಗಳಿಂದ ಅಡುಗೆಯ ಮನೆಯಲ್ಲಿ ಕೆಲಸದವಳೊಡನೆ ಅಧಿಕಾರ ತೋರಿಸಿ ಕೊಂಡಿದ್ದ ತಂಗಿ ಗೀತಾಳೊಡನೆ ಏನನ್ನೋ ಹೇಳಲು ಹೋದಾಗ, ಆಕೆ ಸ್ವಲ್ಪವೂ ಗೌರವ ಕಾಣದ ವಿಧದಲ್ಲಿ ಕಟುವಾಗಿ ನುಡಿದಳು. "ನೋಡಕ್ಕಾ ಇಂಥ ಅಧಿ ಕಾರವೆಲ್ಲಾ ನನ್ನ ಹತ್ತಿರ ಇಟ್ಕೊ ಬೇಡ ಅದೆಲ್ಲಾ ನಿನ್ನ ಮನೆಯಲ್ಲಿ ಇಟ್ಕೊಕೋ" ಈ ಅನಿರೀಕ್ಷಿತ ಮಾತು ಕೇಳಿದ ವಿಜಯ ತಲ್ಲಣಿಸಿದಳು.

ಮದುವೆಯ ಮೊದಲೆಲ್ಲಾ ತನ್ನೊಡನೆ ಬುಟ್ಟಿಯಲ್ಲಿದ್ದ ಹಾವಿನಂತೆ ಅಡಗಿ ಬಿದ್ದಿದ್ದ ಗೀತಳೀನು ಹೀಗೆ ಎದುರು ಬಿದ್ದು ಮಾತ ನಾಡುತ್ತಿರುವುದು. ಒಡಲೆಲ್ಲಾ ಹತ್ತಿ ಉರಿಯಿತು.

ತನ್ನ ಸಮೀಪದಲ್ಲಿ ಗಂಡ ನಿಂತು ಈ ನಾಟಕವನ್ನು ನೋಡುವಂತ ಒಂದು ಭ್ರಮೆ!

ಓಡಿ ಹೋಗಿ ನಿಶ್ಶಬ್ದಳಾಗಿ ಅಳ ಬೇಕೆಂದು ತೋಚಿತು. ಸಮೀಪದಲ್ಲಿ ತನ್ನ ಪುರುಷ ನಿಂತು ಮುಗುಳ್ನಕ್ಕಂತೆ ಭಾಸವಾಯಿತು.

ಅಂದು ಸಂಜೆ ಹಾಲಿನಲ್ಲಿ ಕುಳಿತು ಏನನ್ನೋ ಓದಿಕೊಂಡಿದ್ದಾಗ, ಆಫೀಸಿ ನಿಂದ ಹಿಂತಿರುಗಿ ಬಂದ ಅಣ್ಣ ಡ್ರೆಸ್ಸು ಬದಲು ಮಾಡುತ್ತಿದ್ದಾಗ, "ಏನು ವಿಜಯಾ ನಿನ್ನ ಮನೆಯಿಂದ ಏನಾದರೂ ಟಪಾಲು ಇದೆಯಾ?" ಎಂದು ಕೇಳಿದೊಡನೆ ವಿಜ ಯಾಳ ಎದೆ ಆವೇಶದಿಂದ ಬಡಿಯ ತೊಡಗಿತು.

"ಟಪಾಲು ಯಾರಿಂದ?" ಅಣ್ಣ ಹೇಳಿ ದ್ದು ಸ್ಪಷ್ಟವಾಗದಂತೆ ಕೇಳಿದಳು. "ನಿನ್ನ ಮನೆಯವರಿಂದ ನಿಂಗೆ ಕಾಗದ ಗೀಗದ ಏನಾದರೂ ಬಂತಾ ಅಂತ ಕೇಳಿದೆ" ಅವನ ದನಿ ತುಸು ಗಡುಸಾಗಿತ್ತು.

"ಎರಡೂ ಬರಲಿಲ್ಲ."

"ಎರಡುನಾ?"

"ಲೆಟ್ಟರು ಗಿಟ್ಟರು" ಕೋಪವನ್ನು ಅಡಗಿಸಲು ಶ್ರಮಿಸಿದರೂ ಅದು ಚಿಮ್ಮಿ ಯೇ ಬರುತ್ತಿತ್ತು.

ಇನ್ನು ಆತುರ ಪಡಬಾರದೆಂದು ಅಣ್ಣ ಅಲ್ಲಿಂದ ಕಾಲು ಕಿತ್ತ.

ಸಂಜೆ ಒಂಭತ್ತು ಗಂಟೆಯ ಮೇಲೆ ಅಪ್ಪ ಬಂದರು. ಮೊದಲೆಲ್ಲಾ ಬರು ವಾಗಲೇ 'ವಿಜಯಾ' ಎಂದು ಬಾಯಿ ತುಂಬಾ ಕರೆದುಕೊಂಡೆ ಬರುತ್ತಿದ್ದರು. ಇದಕ್ಕಾಗಿಯೇ ಕಾದಿರುತ್ತಿದ್ದಂತೆ ಅವರ ಮುಂದೆ ಹೋಗಿ ನಿಂತು ಅವರು ಕೊಡು ತ್ತಿದ್ದ ಅಂದಿನ ಅಂಗಡಿ ವ್ಯಾಪಾರದ ಹಣವನ್ನು ತೆಗೆದು ಬೀರುವಿನಲ್ಲಿ ಇಡು ತ್ತಿದ್ದಳು.

'ವಿಜಯ ಹುಟ್ಟಿದ ಮೇಲೆನೆ ವ್ಯಾಪಾ ರದ ಬಿಸಿ ಏರಿದ್ದು'

ಎಂದು ಆಗಾಗ ಹೇಳಿ ಹೆಮ್ಮೆ ಪಟ್ಟು ಕೊಳ್ಳುತ್ತಿದ್ದರು ಅಪ್ಪ. ವಿಜಯಳಿಗೆ ಮನದಲ್ಲಿ ಅದುಮಿಟ್ಟು ಕೊಳ್ಳಲಾರದಂತ ಒಂದು ಆನಂದ ಸಂತೋಷ ಆ ದಿನ ಗಳಲ್ಲಿ.

ಬಹುಶಃ ಈ ಮನೆ, ಇಲ್ಲಿಯ ಸಕಲ ಸಲಕರಣೆಗಳೆಲ್ಲಾ ತನ್ನಿಂದಲೇ ಉನ್ನತಿ ಆದವೆಂಬ ಅಹಂಭಾವವು ಅವಳಲ್ಲಿ ಇದ್ದಿರ ಬೇಕೆಂದು ಕೊಂಡಳು ಗೀತ.

"ಗೀತ ಗೀತಾ" ಎಂದು ಅಪ್ಪ ಕರೆ ದರು. ಬಹುಶಃ ತನ್ನನ್ನೇ ಕರೆಯುತ್ತಿ ದ್ದಾರೆಂದು ಅವರ ಮುಂದೆ ಹೋಗಿ ನಿಂತಳು ವಿಜಯ.

ಆ ಬಾಯಿ ಬಡುಕಿ ಜೊತೆಗೆ ಯಾಕೆ ಈ ಬೇಗ್ಗೆ ತರ್ಕ" ಎಂದು ಪುನಃ ಮುಸುಕು ಎಳೆದುಕೊಂಡಳು.

ಅಮ್ಮ ತನ್ನ ಬಗ್ಗೆ ಮಾತನಾಡುತ್ತಿ ರುವುದು ಕೇಳಿಸಿತು. ಅದನ್ನು ಆಲಿಸು ತ್ತಿದ್ದಂತೆ ವಿಜಯಳಿಗೆ ಬಂದ ವ್ಯಕ್ತಿಯ ಪರಿಚಯವಾಗದೆ ಮನಸ್ಸು ಚಡಪಡಿ ಸಿತು. ತನ್ನ ಮನಸ್ಸಿನಲ್ಲಿ ಏನೇನೋ ಅಸಂಬದ್ಧ ಆಲೋಚನೆಗಳು ಉದ್ಭವಿಸ ತೊಡಗಿದವು. ಅಮ್ಮ ಮಾರ್ಗದ ಅಂಚಿ ನಲ್ಲಿ ನಿಂತು ತನ್ನ ಬಗ್ಗೆ ಅಪಚಾರ ಮಾತ ನಾಡುವಂತೆ ಅನಿಸಿತು.

ಬಂದಾಕೆ ಹೋದ ಬಳಿಕ ಅಮ್ಮ ನನ್ನು ಕರೆದು ಕೇಳಿದಳು. "ಏನಮ್ಮ ನಿನಗೆ ಸ್ವಲ್ಪವಾದರೂ ಬುದ್ಧಿ ಇದೆಯಾ. ಬಂದವರೊಡನೆ ಹೀಗೇನು ಎಲ್ಲವನ್ನು ಒದರುವುದು" ಮನಸ್ಸಿನ ಬೇಗುದಿಯನ್ನು ಬಿಚ್ಚಿ ನುಡಿದಳು.

"ಏನೇ ಅದು ಏನೋ ಮಹಾ ಬೊಗ ಳದೇಂತ ಹೀಗೆ ಉಸಿರು ಬಿಡುತ್ತಿದ್ದಿಯಾ. ಇರೋ ವಿಷಯಾನ್ನ ಹೇಳಿದೆ"

ಇರೋ ವಿಷಯಾನೆ. ಇಲ್ಲಾಂತ ಹೇಳಲಿಲ್ಲ. ಅದಕ್ಕೂ ಒಂದು ಎಲ್ಲೆ ಬೇಡವಾ ಇದು ಯಾರಿಗೆ ಕೇವಲ. ಇದ ರಲ್ಲಿ ನಿನಗೂ ಪಾಲಿಲ್ಲವಾ?"

"ಅದರಿಂದಲೇ ಕಣೇ ನಿನ್ನ ಮನೆಯ ಜನಗಳ ಬಂಡವಾಳವನ್ನು ಊರು ತಿಳಿ ಯಲೀಂತ ಹೇಳಿದೆ"

ವಿಜಯಳ ಅವಸರ ಇಮ್ಮಡಿಯಾ ಯಿತು.

'ನಿನ್ನ ಮನೆ ಜನಗಳು'

"ಇದಾ ನೋಡಮ್ಮ ಇನ್ನು ಮೇಲೆ ನನ್ನ ಮನೆ ಜನಗಳ ವಿಷಯಾನ್ನ ನೀನು ಯಾರ ಹತ್ತಿರಾನು ಮಾತನಾಡಬೇಡ!"

'ನಿನ್ನ ಮನೆ ಜನಗಳು' ಎಂಬ ಮಾತಿ ನಲ್ಲಿದ್ದ ಕಳಂಕವನ್ನು ಒತ್ತಿಕೊಂಡು ಅವಳ ಕೋಪ ಇಮ್ಮಡಿಯಾಯಿತು. ಅದನ್ನು ಸಹಿಸಲಾರದೆ ಹೇಳಿದಳು ವಿಜಯ.

ಎಷ್ಟೆ ದರಿದ್ರದ್ದೆ! ಇವಳಿಗೇಕೆ ಹೀಗೆ ಸಿಡಿತಾ ಇದೆ. ಇವಳ ಮನೆ ವಿಷ ಯಾನ್ನ ಮಾತನಾಡ ಬಾರದಂತೆ! ಮತ್ತೆ ಯಾಕಿನೆ ಕೂಗಿಕೊಂಡು ಇಲ್ಲಿಗೆ ಬಂದೆ?"

ಕರುಣಾಕರ, ಕೊವರ್‌ಕೊಲ್ಲಿ

"ಗೀತ ಎಲ್ಲಮ್ಮಾ ಕರೆ ಅವಳ್ನ" ಎಂದು ಹೇಳಲು ಮುಗಿಲು ತಲೆಯ ಮೇಲೆ ಬಿದ್ದಂತೆ ಅನಿಸಿತು ಆಕೆಗೆ.

ತನ್ನ ವಿವಾಹವಾಗಿ ಹೊಸ ಸಂಸಾರ ದೊಡನೆ ಬಾಳುವೆ ನಡೆಸಲು ತೊಡಗಿದ ದಿನಗಳಿಂದ, ಗೀತ ಅಪ್ಪನಿಗೆ ತನ್ನಂತೆ ಆಗಿದ್ದಾಳೆ. ಇದು ಸಹಜ. ಇದಕ್ಕಾಗಿ ಮರುಗುವುದರಲ್ಲಿ ಅರ್ಥವಿಲ್ಲವೆಂದು ಮನ ಸ್ಸಿನಲ್ಲಿ ಸಮಾಧಾನ ಪಟ್ಟುಕೊಂಡು, "ಇಲ್ಲಿ ಕೊಡಿ ಅಪ್ಪ ಬೀರಿನಲ್ಲಿ ಇಟ್ಟಿರು ತ್ತೇನೆ" ಎಂದು ಪೊರಗೆ ಹೋಗಿ ಕೈ ನೀಡಿದಳು ವಿಜಯ.

"ನಿನಗ್ಯಾಕಮ್ಮ ಶ್ರಮ. ಎಲ್ಲವನ್ನು ಗೀತ ನೋಡಿಕೊಳ್ತಾಳೆ. ನಿನ್ನ ಮನೆ ಯಲ್ಲಿ ಕಷ್ಟ ಪಟ್ಟೆ ಇಲ್ಲಿಯೂ ಯಾಕೆ ಕಷ್ಟ ಪಡುತ್ತಿಯಾ ನೀನು. ಹೋಗು ರೆಸ್ಟ್ ತೆಗೋ" ಅಪ್ಪ ವಿಷಾದದಿಂದ ಹೇಳಲು ವಿಜಯಳಿಗೆ ಮುನ್ನುಗ್ಗಿ ಬಂದಿದ್ದು ಅಳುವೊಂದೇ ಆಗಿತ್ತು. ಅವುಡು ಗಚ್ಚಿ ತನ್ನ ಕೊಠಡಿ ಸೇರಿ ದಿಂಬಿಗೆ ತಲೆ ಒರಗಿಸಿ ಕುಳಿತಳು. ಈ ಬಾರಿ ಗಂಡ ಕೋಣೆ ತುಂಬಾ ಗಹಗಹಿಸಿ ನಕ್ಕಂತೆ ಅನಿಸಿತು.

ಮರುದಿನ ಮುಂಜಾನೆ ಯಾರೋ ಒಬ್ಬ ಸ್ತ್ರೀಯೊಡನೆ ಅಮ್ಮ ಮಾತಾನಾಡಿ ಕೊಂಡಿರುವ ಧ್ವನಿಯನ್ನು ಕೇಳಿ ಕಣ್ಣು ಬಿಟ್ಟವಳು, ಚೆನ್ನಾಗಿ ಬೆಳಕಾಯಿತಲ್ಲ ಎಂದು ಅರೆ ಜರೆಯಾಗಿ ಎದ್ದಳು, ಎದ್ದು ಏನು ತಾನೆ ಮಾಡುವುದಿದೆ. ಗೀತಳೊ ಡನೆ 'ಅದು ಮಾಡು ಇದು ಮಾಡು' ಎಂದು ಅಧಿಕಾರ ತೋರಿಸಬೇಕಾಗುತ್ತೆ. ಯಾರೋ ಮೂರನೇ ವ್ಯಕ್ತಿಯೊಡನೆ ಮಾತನಾಡುವಂತೆ ಅಮ್ಮ ಬಿರುಸಾಗಿ ನುಡಿದು ಹೊರಗೆ ಅಡಿ ಇರಿಸಿದಳು.

ಕೋಣೆ ತುಂಬಾ ಪ್ರತಿಧ್ವನಿಸುವಂತೆ ಚಪ್ಪಾಳೆ ತಟ್ಟಿ ತನ್ನ ಗಂಡ ಗಹ ಗಹಿಸಿ ನಕ್ಕಂತೆ ಭಾಸವಾಯಿತು ಆಕೆಗೆ.

ಎಷ್ಟು ದಿನಗಳ ವರೆಗೆ ಹೀಗೆ ಗೂಬೆ ಯಂತೆ ಸದ್ದಿಲ್ಲದೆ ಕುಳಿತು ಮೌನ ಕಣ್ಣೀರು ಹಾಕುವುದು. ಅಳುವುದನ್ನು ಯಾರಾದರೂ ನೋಡುವರೆಂದು ಉಮ್ಮ ಳಿಸಿ ಬರುವ ದುಃಖವನ್ನು ನುಂಗಿ ಕೊಳ್ಳಲು ಮತ್ತೆ ಮತ್ತೆ ಶ್ರಮಿಸಿದಳು. ಆ ಸಮಯದಲ್ಲಿ ಅಮ್ಮನ ಕಂಠ ಕೊಠ ಡಿಯ ಬಾಗಿಲಲ್ಲಿ ಪುನಃ ಕೇಳಿಸಿತು.

"ಆ ಸಾಲಗಾರ ಬಂದಿದ್ದಾನೆ. ಹೋಗಿ ನೋಡ್ರಿ"

"ಯಾರು?" ಅಪ್ಪನ ಪ್ರಶ್ನೆ.

"ವಿಜಯಳ ಗಂಡ"

"ಅವನು ಯಾಕೆ ಬಂದ?"

ವಿಜಯ ಹಾಸಿಗೆಯನ್ನು ಬಿಟ್ಟು ಚಕ್ಕನೆ ಎದ್ದು ಕುಳಿತಳು. ಒಡಲೆಲ್ಲಾ ವಿದ್ಯುತ್ ಚಲಿಸಿದಂತಾಯಿತು. ತಾನೇನು ಮಾಡು ವುದೆಂದು ನಿರ್ಣಯಿಸಲಾಗದ ಒಂದು ಥರನಾದ ದಿಗಿಲು. ಸಂತೋಷವೇ? ಚಂಚ ಲವೇ? ಅವೆರಡು ಒಂದಾದುದೇ?!

"ಹೆಂಡತೀನ್ನ ಹುಡುಕಿಕೊಂಡು ಬಂದಿ ರಬೇಕು. ಹೋಗಿ ಕೇಳ್ರಿ"

ಅಮ್ಮ ಅಪ್ಪನನ್ನು ಕಳುಹಿಸಿದರು.

"ಏನೇ ಹೋಗಿ ಕೇಳೋದು?"

"ನಾಲಿಗೆ ಕಿತ್ತು ಬರುವಂತೆ ಕೇಳಿ ಅಪ್ಪ" ತಂಗಿ ಗೀತ ಗಡುಸಾಗಿ ಅಂದಳು.

ಅಪ್ಪ ನೀವು ಇರಿ. ನಾನು ಹೋಗಿ ವಿಚಾರಿಸಿಕೊಳ್ತೇನೆ" ಎಂದು ಹಾಲಿಗೆ ಹೋದ ಅಣ್ಣನನ್ನು ತಡೆದ ಅಮ್ಮ.

"ಯಾರೂ ಹೋಗ ಬೇಡಿ ನಾನೆ ಹೋಗಿ ಕೇಳಿಕೊಳ್ತೇನೆ. ಒಂದೇ ವಾರ್ತೆ ಮಾತ್ರ, ನಿನಗೆಲ್ಲಾ ಯಾಕೆ ಹೆಂಡತಿ ಹೋಗಿ ನಿನ್ನ ಅಮ್ಮನನ್ನು ಕಳುಹಿಸು ಮಾತನಾಡಿಕೊಳ್ತೇನೆ ಅಂತ ಹೇಳಿ ಬಂದು ಬಿಡ್ತೇನೆ" "ಇದಾ ಮಾತನಾಡದೆ ಇರು. ತಲೆ ಇರುವಾಗ ಬಾಲ ಆಡಬಾರದು. ನಾನೆ ನೋಡಿ ಕೊಳ್ತೇನೆ. ವಿಜಯ ಇನ್ನು ಇಲ್ಲೇ ಇರ್ತಾಳೆ. ಏನಾದರೂ ಮಾತ ನಾಡ ಬೇಕೆಂದಿದ್ದರೆ ಕೋರ್ಟಿನಲ್ಲಿ ಮಾತ ನಾಡು ಎಂದು ಹೇಳಿ ಬಂದು ಬಿಡ್ತೇನೆ" ಎಂದು ಅಪ್ಪ ಧಾವಿಸಿದರು. ಅವರ ಹಿಂದೆ ಉಳಿದವರು ಹಿಂಬಾಲಿಸಿದರು. ಹಾಲಿನ ಒಳಗೆ ನುಸುಳುವ ಮೊದಲು ಎಲ್ಲರಿಗಿಂತ ಮುಂಚಿತವಾಗಿ ವಿಜಯಾ ದಿಢೀರನೆ ಮುಗುಳ್ನಗೆಯ ಮುಖದೊಡನೆ ಅತ್ತ ಧಾವಿಸಿದಳು.

"ಬನ್ನಿ ಬಂದು ತುಂಬಾ ಸಮಯ ಆಯ್ತು? ಊರಿನಲ್ಲಿ ಅತ್ತೆ ಎಲ್ಲರೂ ಚೆನ್ನಾ ಗಿದ್ದಾರಾ? ಅವರ್ನ ಕರೆದುಕೊಂಡು ಬರ ಬಾರದಿತ್ತಾ. ನೀವು ಬರೋದೂಂತ ಇದ್ದಿ ದ್ದರೆ ಒಂದು ಕಾಗದ ಬರೆದು ಹಾಕ ಬಹುದಿತ್ತಲ್ಲ. ನಿಮಗೆಲ್ಲ ಅದೆಲ್ಲಿ ತಿಳಿ ಯುತ್ತೆ ಸರಿ! ಈಗ ನನ್ನ ಕರೆದುಕೊಂಡು ಹೋಗಲು ತಾನೆ ಬಂದಿದ್ದೀರಿ. ಇದ್ದು ನಾಲ್ಕು ದಿವಸ ಕಳೆದು ಹೋಗಬಹು ದಲ್ಲ? ಇಲ್ಲ......ಈಗಲೇ ಹೊರಡ ಬೇಕಾ? ಈಗಲೇ ಹೊರಟರೆ ಉತ್ತಮಾಂತ ಅನಿಸುತ್ತೆ. ನಿಮಗೆ ಬೇರೆ ಲೀವ್ ಇರೋ ದಿಲ್ಲ. ಒಡನೆ ಹೊರಡಬೇಕೆಂದೆನಿಸಿ ಬಂದಿರ ಬಹುದು. ಸ್ವಲ್ಪ ಇರಿ ಡ್ರೆಸೆಲ್ಲಾ ತೆಗೆದು ಇಟ್ಟು ಬಂದು ಬಿಡ್ತೇನೆ" ಎಂದು ಗಂಡನ ಮಾತಿಗೆ ಎದುರು ನೋಡದ ವಿಜಯಾ ಳನ್ನು ತೌರು ಮನೆಯವರು ಮಾತ್ರ ವಲ್ಲದೆ, ಪತಿಯು ದಿಗ್ಭ್ರಮೆಯಿಂದ ನೋಡಿದನು.

ವೇಗವಾಗಿ ಉಡುಪುಗಳನ್ನು ಸೂಟ್ ಕೇಸಿನಲ್ಲಿ ತುರುಕಿಸಿಕೊಂಡು ನಿಂತ ವಿಜ ಯಾಳ ಹಿಂದೆ ಬಂದು ನಿಂತ ಅಮ್ಮ. "ಏನೇ ದಿಢೀರನೆ ಬದಲಾದೆ? ಒಡನೆ ಹೊರಡಬೇಕೂಂತ ಒಂಟೀ ಕಾಲಿನಲ್ಲಿ ನಿಂತಿದ್ಯಾ?" ಎಂದು ಕೇಳಿದಾಗ ತಂಗಿ ಗೀತ ಹೇಳಿದಳು.

"ಏನೇ ಇರಲಿ ಗಂಡನನ್ನು ನೋಡಿ ದೊಡನೆ ಹೀಗೆನೇ" ವಿಜಯ, ತಾಯಿ ತಂಗಿಯರನ್ನು ಉರಿಯುವ ಕಣ್ಣುಗ ಳಿಂದ ದಿಟ್ಟಿಸುತ್ತಾ, ಅಂದಳು' "ಅಮ್ಮ ಏನೇ ಆದರೂ ತೌರುಮನೆ ಮದುವೆ ಗಿಂತಾ ಮುಂಚೆ. ಅನ್ಯ ಮನುಷ್ಯರಲ್ಲಿ ಸಂಬಂಧ ಬೆಳೆಸಿದ ಮೇಲೆ ಇಲ್ಲಿ ಬಂದ ನಾಲ್ಕೇ ನಾಲ್ಕು ದಿನಗಳಲ್ಲಿ ಅರ್ಥಮಾಡಿ ಕೊಂಡೆ. ಇನ್ನು ಮಾತ್ರ ಜನ್ಮದಲ್ಲಿ ಕೋಪತಾಪಾಂತ ಬಂದು ನಿಲ್ಲೋದಿಲ್ಲ. ನನ್ನ ಮನೆಯ ಸಮಸ್ಯೆ ನನ್ನ ಮನೆ ಯಲ್ಲೇ. ಪಾಠ ಕಲಿಸಿ ಕೊಟ್ಟ ನಿಮಗೆ ಲ್ಲರಿಗೂ ಧನ್ಯವಾದಗಳು." ಎಂದು ಅವಳು ಸೂಟ್‌ಕೇಸನ್ನು ಸರಿಯಾಗಿ ಮುಚ್ಚಿ ತೆಗೆದುಕೊಂಡು ನಿಧಾನವಾಗಿ ಪತಿ ಕುಳಿ ತ್ತಿದ್ದ ಹಾಲಿಗೆ ಅಡಿ ಇಟ್ಟಳು.

ಯಾವ ಪಾಠವನ್ನು ವಿಜಯಾಳಿಗೆ ಕಲಿಸಿಕೊಟ್ಟವೆಂದು ಹೀಗೆ ಧನ್ಯವಾದಗ ಳನ್ನು ಅರ್ಪಿಸುತ್ತಿದ್ದಾಳೆಂದು ಅಚ್ಚರಿ ಗೊಂಡ ತಾಯಿ ಮಗಳು ವಿಜಯಾಳನ್ನು ಹಿಂಬಾಲಿಸಿದರು.

ಜಪಾನೀ ಹೈಕುಗಳು

ಕೊಳಕು ಬಚ್ಚಲು ಕೀಟ,
ಎಲ್ಲೆಂದು ಚೆಲ್ಲಲಿ
ನಿನ್ನ ?...... ಕೀಟಗಳು
ಹಾಡುತಿವೆ ಹುಲ್ಲಿನಲಿ.
ತಿಂಗಳ ಬೆಳಕು ಅದೆಷ್ಟು ಮೋಹಕ!
ಓಹ್! ಅಗೋ ರೈತನೊಬ್ಬ
ಅದೇ ಬೆಳಕಿಗೆ
ತನ್ನ ಮೆಚ್ಚಿನ ಭತ್ತದ ತೆನೆ ಬಡಿವ ಸದ್ದು!
ಮತ್ತೊಮ್ಮೆ ಸಂಧಿಸ ಬಲ್ಲೆವೆ ನಾವು
ಇಲ್ಲಿ ನಮ್ಮ
ಅರಳುತ್ತಿರುವ ಸಮಾಧಿ......
ಬಿಳಿಯ ಅವರೆ ಹಾದರಗಿತ್ತಿ ?
ಸಡಗರದ ಹೊಸ ವರ್ಷದ ದಿನ
ನನ್ನ ಕಳೆದ ವರ್ಷದ ಬಿಲ್ಲುಗಳು
ದಯ ಮಾಡಿಸುತ್ತವೆ-
ತಮ್ಮ ಶುಭಾಶಯ ಸಲ್ಲಿಸಲು.
ಈ ಹೂಗಳ
ಬೆಟ್ಟ ಹತ್ತಬಲ್ಲವನಿಲ್ಲಿ
ದರ್ಶಿಸುವನೊಂದು
ದಯಾಮಯಿ ದೇವಿಗುಡಿಯ.
ಕೆಲವು ಬಡ ಹಳ್ಳಿಗಳಿಗೆ
ತಾಜಾ ಮೀನಾಗಲಿ
ಹೂವಾಗಲಿ ದೊರೆಯದು...
ಈ ಚಂದ್ರನ್ನ ಎಲ್ಲ ಹಂಚಿಕೊಳ್ಳಬಹುದು.
ನನ್ನ ಕಿರು ಹಳ್ಳಿಯಲ್ಲಿ
ನೊಣ ಸಹಾ
ದೊಡ್ಡ ಮನುಷ್ಯನ ಕಚ್ಚಲು
ಹೆದರಲಾರವು.
ಒಂದು ವರ್ಷ ಉರುಳಿತು
ಆದಾಗ್ಯು
ನಾನಿನ್ನೂ ತಿಳಿದಿಲ್ಲ
ನನ್ನ ಹೊಸ ಧಣಿಯ ಹೆಸರು.
ಎಲ್ಲ ಹಾಡಿನ ಬಿತ್ತ
ಭತ್ತ ನಾಟಿ ಹಾಕುತ್ತ
ಕುರುಕುವ ರೈತನ
ಸಂಭ್ರಮದ ಗುನುಗುನು.
ನಿದ್ರಿಸುತಿರುವ ಬಸವನ ಹುಳದ
ಯಾವ ಹುದಿ ಯಾವುದೆಂದು
ಪ್ರಾರ್ಥಿಸುವುದು
ಸುಲಭವೇನಲ್ಲ.
ದೇವಾಲಯದ ಛಾವಣಿ
ಕಂಚಿನ ಗಂಟೆ ಮೇಲೆ
ಹಚ್ಚೆ ಹಗಲ ನಿದ್ರಿಸಿದೆ
ಪಾತರಗಿತ್ತಿ.
ಮುಟ್ಟಬೇಡ ನನ್ನ ಪ್ಲಮ್ ಗಿಡ
ಎಂದ ನನ್ನ ಗೆಳೆಯ,
ಹಾಗೆ ಹೇಳುತ್ತ...
ಸುಗಾಗಿ ಗೆಲ್ಲ ಮುರಿದ.

●ಅಕ್ಕಿ

—ಶ್ರೀಮದ್ ಬಡವದ್ಗೀತಾ—

ತಂ ತಥಾ ಕೃಪಯಾವಿಷ್ಟಮಶ್ರುಪೂರ್ಣಾಕುಲೇಕ್ಷಣಂ।
ವಿಷೀದಂತ ಮಿದಂ ವಾಕ್ಯ ಮುವಾಚ

ಈ ರೀತಿಯಾಗಿ ಕಷ್ಟ ಕಾರ್ಪಣ್ಯಗಳ ಬೇಗೆಯಿಂದ ದಯಾರ್ದ್ರನಾಗಿ ಕಂಬನಿದುಂ ಬಿದ ಕಣ್ಣುಗಳಿಂದ ಶೋಕತಪ್ತನಾದ ಬಡ ಬೋರನಿಗಾಗಿ ಈ ವಾಕ್ಯಗಳು ಹೇಳ ಲ್ಪಟ್ಟಿವೆ.

ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ।
ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ

ಬಡತನದ ರೇಖೆಯ ಕೆಳಗೆ ಕಂತಿಹೋಗಿರುವಂತಹ ನೀನು ಬದುಕುವ ಸಲು ವಾಗಿ, ಯೂನಿಯನು, ಡಿಕ್ಲರೇಶನುಗಳ ಮೂಲಕ ದಮನ ದಬ್ಬಾಳಿಕೆಗಳ ವಿರುದ್ಧ ಹೋರಾಡಲು ಎದ್ದೇಳು. ನಿರ್ಭಯನಾಗಿ ಮುನ್ನಡೆ. ಸ್ವತಂತ್ರನಾಗು.

ನತ್ವೇವಾಹಂಜಾತು ನಾಸಂ ನತ್ವಂ ನೇಮೇ ಜನಾಧಿಪಾಃ
ನಚೈವ ನಭವಿಷ್ಯಾಮಃ ಸರ್ವೇವಯಮತಃ ಪರಂ

ಈ ವ್ಯವಸ್ಥೆಯಲ್ಲಿ ನಾನೂ, ನೀನೂ, ಸಾಹುಕಾರರೂ ಅಂದೂ, ಇಂದೂ, ಮುಂ ದೆಯೂ ಸದಾ ಇರುತ್ತೇವೆ. ಆದರೆ ಸಾಹುಕಾರ ದನಿಯಾಗಿಯೂ, ನೀನು ಯಾ ವಾಗಲೂ ಆಳಾಗಿಯೇ ಇರಬೇಕೆಂಬುದು ಸದಾಸತ್ಯ.

ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ।
ತಥಾ ದೇಹಾಂತರ ಪ್ರಾಪ್ತಿ: ಧೀರಸ್ತತ್ರನಮುಹ್ಯತಿ

ಮಾನವ ದೇಹ ಧಾರಣೆ ಮಾಡಿರುವ ನೀನು ಬಾಲ್ಯದಲ್ಲಿಯೂ, ಯೌವನದಲ್ಲಿ ಯೂ, ವೃದ್ಧಾಪ್ಯದಲ್ಲಿಯೂ ದುಡಿದೂ ದುಡಿದೂ ಒಂದು ದಿನ ಜೀವ ಬಿಡು ವುದು ಒಂದು ಸಾಮಾನ್ಯ ವಿಷಯವಾದ್ದರಿಂದ ಬುದ್ಧಿವಂತರು ಎನಿಸಿಕೊಂಡವರು ಇದರ ಬಗ್ಗೆ ಎಂದೂ ತಲೆ ಕೆಡಿಸಿಕೊಳ್ಳುವುದಿಲ್ಲ.

ಮಾತ್ರಾ ಸ್ಪರ್ಶಾಸ್ತು ಕೌಂತೇಯ ಶೀತೋಷ್ಣ ಸುಖ ದುಃಖ ದಾಃ।
ಆಗಮಾಪಾಯಿನೋ ನಿತ್ಯಾ ಸ್ತಾಂಸ್ತಿತಿಕ್ಷಸ್ವ ಭಾರತ

ಈ ದೇಹಕ್ಕೆ ಶೀತೋಷ್ಣಗಳಂತಹ ಬೇನೆಗಳು ಆಗಾಗ ಬಂದು ಹೋಗುವುದರಿಂದ ವೈದ್ಯರ ಬಳಿಗೆ ವಿಪರೀತ ಬೆಲೆಯ ಇಂಜಕ್ಷನು ಇತ್ಯಾದಿಗಳಿಗಾಗಿ ಹೋಗದೆ, ಮನಸ್ಸಿನಂತೆ 'ಮಾತ್ರೆ ಗುಳಿಗೆಗಳನ್ನು ಸೇವಿಸಿ ಬಚಾವಾಗು'

ಅವ್ಯಕ್ತಾದೀನಿ ಭೂತಾನಿ ವ್ಯಕ್ತ ಮಧ್ಯಾನಿ ಭಾರತ
ಅವ್ಯಕ್ತ ನಿಧನಾನ್ಯೇವ ತತ್ರ ಕಾ ಪರಿದೇವನಾ

ನೀನು ಹುಟ್ಟುವುದಾಗಲೀ ಸಾಯುವುದಾಗಲೀ ಶಕ್ತಿಯಲ್ಲಿ ಬರುವುದಿಲ್ಲ. ಅದ್ದರಿಂದ ಇದು ಎಲ್ಲೂ ವ್ಯಕ್ತವಾಗುವುದಿಲ್ಲ. ಕೇವಲ ಬದುಕಿನ ಹೋರಾಟದ ಸಮಯ ದಲ್ಲಿ ಮಾತ್ರ ನಿನ್ನ ಇರವು ವ್ಯಕ್ತವಾಗುತ್ತದೆ.

ಹತೋವಾ ಪ್ರಾಪ್ಯಸಿ ಸ್ವರ್ಗಂ ಜಿತ್ವಾವಾ ಭೋಕ್ಷ್ಯಸೇ ಮಹೀಂ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತ ನಿಶ್ಚಯಃ

ಎಲ್ಲಾ ರೀತಿಯ ದಮನ ದಬ್ಬಾಳಿಕೆಗಳಿಂದ ಪಾತಾಳಕ್ಕೆ ಕಂತಿ ಹೋಗಿರುವ ನೀನು ಸತ್ತರೂ ಕಳೆದು ಹೋಗುವುದೇನೂ ಇಲ್ಲ. ಹೋರಾಟದಲ್ಲಿ ಜಯಶಾಲಿಯಾದರೆ ಅಧಿಕಾರ ನಿನ್ನ ಬಳಿಗೆ ಬರಬಹುದು ಎಂಬ ಪ್ರಜ್ಞೆಯಿಂದ ಹೋರಾಡಲು ಎದ್ದು ನಿಲ್ಲು.

ಯಾವಾನರ್ಥ ಉದಪಾನೇ ಸರ್ವತ: ಸಂಪ್ಲುತೋದಕೇ।
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತ:

ಬಾವಿಯ ನೀರು ಕೆಲವು ಜನರಿಗಷ್ಟೇ ಪ್ರಯೋಜನವಾಗುವಂತೆ ವೇದಗಳಿಂದ ಬ್ರಾಹ್ಮಣರಿಗೆ ಮಾತ್ರ ಪ್ರಯೋಜನ. ದೇವರಿಗೂ ಸಹ ಇಲ್ಲ.

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ।
ಮಾ ಕರ್ಮಫಲಹೇತುರ್ಭೂರ್ಮಾತೇ ಸಂಗೋಽಸ್ತ್ವ ಕರ್ಮಣಿ

ಕೆಲಸದ ಹಕ್ಕು ನಿನಗೆ ಇರುವಂತೆ ಸರಿಯಾದ ಕೂಲಿಯ ಹಕ್ಕು ಸಹ ಇರುತ್ತದೆ. ಇದನ್ನು ಸರಿಯಾಗಿ ಅರಿತು ಸಂಘ ಸಂಘಟನೆಗಳಿಂದ ಕಾರ್ಯ ಪ್ರವೃತ್ತನಾಗು.

ಸತ್ತವರ ಧರ್ಮಂಚರ। ಕಾಲಾಯ ತಸ್ಮೈ ನಮಃ।

ದೇವರು, ಧರ್ಮ, ಪಾಪ ಪುಣ್ಯ, ಸ್ವರ್ಗ ನರಕ ಎಂದೆಲ್ಲಾ ಶಾಸ್ತ್ರ ಹೇಳಿ ತಾವು ಮಾತ್ರ ಕೊಳಕು ನೀರಿನಲ್ಲಿ ಗಾಳ ಹಾಕುವವರಿದ್ದಾರೆ. ಸುಳ್ಳು ಹೇಳುವುದು, ಟಿಕೆಟಿಲ್ಲದೆ ರೈಲು ಪ್ರಯಾಣವೆಂದೇ ಇವರು ಅರ್ಥವಿಸಿಕೊಂಡಿದ್ದಾರೆ. ಎಲ್ಲಿ ಬಡವರ ಉದ್ಧಾರದ ಬಗ್ಗೆ ಬೀದಿ ಬಿಡುವಾಗ ಪುಷ್ಪ ಪುಡಾರಿಗಳು ಕೊಳಗಳಬ್ಬರ ಕಣ್ಣೀರು ಸುರಿಸಿ ಭಾಷಣ ಬಿಗಿ ಯುವರೋ ಅಲ್ಲಿ ನೀನು ಹಲ್ಲಿರಿದು ಸಲಾಮು ಹೊಡೆಯುತ್ತಿದ್ದರೆ ಪುಡಾರಿ ಪ್ರಸನ್ನನಾಗಿ ನಿನಗೆ ಐಶ್ವರ್ಯ ವಿಜಯ ಫಲ ಪ್ರಾಪ್ತಿಯಾಗಬಹುದೆಂದು ತಿಳಿ.

(ಟೀಕಾರ್ಥ ಸಹಿತ ಸಾಂಖ್ಯ ಯೋಗವು)

-ಬಿ. ಸಿ. ಶಿವಪ್ಪ, ಹೊನ್ನಾವರ

ಭೀತಿ

ನಲ್ಲ ನೀ
ಮೊದಮೊದಲು
ತೋರಿದ ಪ್ರೀತಿ
ನಂತರದ ನಿನ್ನ ರೀತಿ
ಉರುಳಾಗಿ ನಿಂತಿತಲ್ಲಾ ಎನ್ನುವುದೇ
ಮನದಲಿ ಭೀತಿ.

-ಎ. ಯು. ರವಿ

ಪಾಪು ಪುಟಾಣಿ

ಒಂದು ಕಾಡಿನಲ್ಲಿ ಬಲಶಾಲಿ ಸಿಂಹ ವೊಂದು ವಾಸವಾಗಿತ್ತು. ಬಲಶಾಲಿಯೂ ಆದ್ದ ಕಾರಣ ಆ ಕಾಡಿನ ರಾಜ ತಾನೇ ಎಂಬ ಅಹಂಕಾರ ಅದಕ್ಕಿತ್ತು. ತನಗೆ ಹಸಿವೆಯಾದಾಗ ನಿರ್ದಾಕ್ಷಿಣ್ಯವಾಗಿ ಪ್ರಾಣಿಗಳನ್ನು ಕೊಂದು ತಿನ್ನುತ್ತಿತ್ತು. ಕಾಲ ಕ್ರಮೇಣ ಈ ಸಿಂಹಕ್ಕೆ ಮುದಿತನ ಬಂದಾಗ ಕಾಡಿನ ಎಲ್ಲಾ ಪ್ರಾಣಿಗಳಿಗೂ ಅದರ ದುರ್ಬಲತೆಯ ಅರಿವಾಯಿತು. ಆದುದರಿಂದ ಕಾಡಿನ ಯಾವ ಪ್ರಾಣಿಗಳೂ ಆ ಸಿಂಹಕ್ಕೆ ಹೆದರದೆ ತಮ್ಮ ತಮ್ಮ ಪಾಡಿಗೆ ತಾವು ಹಾಯಾಗಿದ್ದವು.

ಸಿಂಹಕ್ಕೆ ಆಹಾರದ ಕೊರತೆಯಾಗತೊಡಗಿತು. ಶಕ್ತಿಹೀನ ಮುದಿ ಸಿಂಹ ತನ್ನ ಗತಜೀವನದ ಬಗ್ಗೆ ಆಲೋಚಿಸುತ್ತಾ ಇರುವಾಗ ಅದಕ್ಕೆ ತನ್ನ ಅಜ್ಜ ಹೇಳುತ್ತಿದ್ದ ನಾಣ್ನುಡಿಯ ನೆನಪಾಯಿತು. ಅದೇ "ಶಕ್ತಿಗಿಂತ ಯುಕ್ತಿ ಮೇಲು" ಎಂದು.

ಸರಿ, ತನಗೆ ಶಕ್ತಿಯಂತೂ ಇಲ್ಲ, ಇನ್ನು ಯುಕ್ತಿಯನ್ನಾದರೂ ಉಪಯೋಗಿಸಿ ಆಹಾರವನ್ನು ಸಂಪಾದಿಸಬೇಕೆಂದು ಯೋಚಿಸಿ ಪಕ್ಕದಲ್ಲೇ ಇದ್ದ ನದಿ ತೀರಕ್ಕೆ ಹೋಯಿತು. ಹಸಿದ ಹೊಟ್ಟೆಯನ್ನು ನೀರು ಕುಡಿದಾದರೂ ತಣಿಸುವ ಎಂದು ನೀರು ಕುಡಿಯಲು ಬಗ್ಗುವಷ್ಟರಲ್ಲಿ ನದಿ ದಡದಲ್ಲಿ ಅದಕ್ಕೊಂದು ವಜ್ರದುಂಗುರ ಸಿಕ್ಕಿತು.

ವಜ್ರದುಂಗುರ ಕಂಡ ಕೂಡಲೇ ಸಿಂಹ ತನ್ನ ಯುಕ್ತಿಯನ್ನು ಪ್ರಯೋಗಿಸಲು ತೀರ್ಮಾನಿಸಿತು. ನದಿಯ ಆಚೆ ದಡದಲ್ಲೇ ಒಬ್ಬ ಬಡ ಬ್ರಾಹ್ಮಣ ವಾಸವಾಗಿದ್ದ. ಆತ ತುಂಬಾ ಆಸೆಬುರುಕ. ಆತನ ಆಸೆಬುರುಕತನವನ್ನು ಚೆನ್ನಾಗಿ ಅರಿತ ಸಿಂಹ, ತನ್ನ ಯುಕ್ತಿಯನ್ನು ಆತನ ಮೇಲೆ ಪ್ರಯೋಗಿಸಿ, ಆ ದಿನದ ಆಹಾರವನ್ನಾಗಿ ಆತನನ್ನು ಕಬಳಿಸಬೇಕೆಂದು ಯೋಚಿಸಿ, ಬ್ರಾಹ್ಮಣನನ್ನು ಜೋರಾಗಿ ಕೂಗಿತು.

ಬ್ರಾಹ್ಮಣ ಸಿಂಹದ ಕೂಗನ್ನು ಕೇಳಿ ಮನೆಯಿಂದ ಹೊರಬಂದಾಗ ಸಿಂಹ ನದಿಯ ಆಚೆ ದಡದಲ್ಲಿ ನಿಂತು ವಜ್ರದ ಉಂಗುರವನ್ನು ತೆಗೆದುಕೊಂಡು ಹೋಗುವಂತೆ ಬ್ರಾಹ್ಮಣನಿಗೆ ಜೋರಾದ ಸ್ವರದಲ್ಲಿ ಹೇಳುತ್ತಿತ್ತು. ಆಸೆಬುರುಕ ಬ್ರಾಹ್ಮಣ ಸಿಂಹದ ಮೇಲೆ ಮೊದಲು ಅಪನಂಬಿಕೆ ವ್ಯಕ್ತಪಡಿಸಿದರೂ, ವಜ್ರದುಂಗುರದ ಆಸೆಯಿಂದ ಕಾಲ್ನಡಿಗೆಯಲ್ಲೇ ನದಿ ದಾಟಿ ವಜ್ರದುಂಗುರ ತರಲು ಧಾವಿಸಿದ.

ದಡ ಸೇರುವ ಆತುರದಲ್ಲಿದ್ದ ಬ್ರಾಹ್ಮಣನಿಗೆ ದಡದಲ್ಲಿ ಕೆಸರಿದೆ ಎಂಬ ಜ್ಞಾನವೇ ಇರಲಿಲ್ಲ. ಸಿಂಹವಿದ್ದ ಜಾಗಕ್ಕೆ ಬಂದು ಇನ್ನೇನು ವಜ್ರದುಂಗುರ ಪಡೆದುಕೊಳ್ಳಬೇಕೆನ್ನುವಷ್ಟರಲ್ಲೇ ಆತನ ಎರಡೂ ಕಾಲುಗಳು ಕೆಸರಿನಲ್ಲಿ ಹೂತುಹೋದವು. ಈ ಸುಸಂದರ್ಭವನ್ನೇ ಕಾಯುತ್ತಿದ್ದ ಮುದಿ ಸಿಂಹ ಈ ಬಡ ಬ್ರಾಹ್ಮಣನ ಮೇಲೆರಗಿ ಆತನನ್ನು ಕೊಂದು ಹಾಕಿತು. ಸಿಂಹದ ಆ ದಿನದ ಆಹಾರ ಬಡ ಆಸೆಬುರುಕ ಬ್ರಾಹ್ಮಣನಾಗಿದ್ದ.

—ತುಷಾರ ಎಸ್. ಆಳ್ವ

ಅನಿಸಿಕೆ

ಒಂದಾಗಲಿ

ಪ್ರಿಯರೆ,

ಬಿ. ಎಂ. ಹನೀಫ್ ಅವರ 'ಹೊಸ ಪಾದಿಯತ್ರ ನೆಕ್ಸಲೈಟರು' ತಾ. 3-6-85ರ 'ವಾರದ ಮುಂಗಾರು'ವನ್ನು ಶೋಭಿಸುವಂತೆ ಮಾಡಿದೆ.

ಲೇಖಕರು 'ನೆಕ್ಸಲೈಟರು'ಗಳ ಕಾರ್ಯಾಚರಣೆಯನ್ನು ಮೂರ್ಖತನವೆಂದೂ ಕರೆದಿದ್ದಾರೆ. ಇಂಥವರಿಲ್ಲದಿದ್ದರೆ ಈ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸ್ವಾರ್ಥಗಳ ಸಂಖ್ಯೆ ಪರಮಾವಧಿಗೆ ಏರಿಬಿಡಬಹುದು ಎಂಬ ಸತ್ಯವನ್ನು ಬಹುಶಃ ಲೇಖಕರು ಅರಿತಿರಲಾರರು. ಇಂದಿಗೂ ಅವಿದ್ಯಾವಂತ, ಅವಿವೇಕಿಗಳಿಂದ ತುಂಬಿದ ಹಳ್ಳಿಗಳಲ್ಲಿ ಜಮೀನ್ದಾರರ ದಬ್ಬಾಳಿಕೆ, ಅತ್ಯಾಚಾರ ನಡೆಯುತ್ತಲೇ ಇದೆ. ಚಾರು ಮುಜುಂದಾರ್‌ನಂಥ ಒಬ್ಬೊಬ್ಬ ವ್ಯಕ್ತಿಗಳು ಒಂದೊಂದು ಹಳ್ಳಿಗಳಲ್ಲಿದ್ದರೆ ಈ ಕಲ್ಮಶ ಸಮಾಜದಲ್ಲಿ ಬಡವರು ಇಷ್ಟೊಂದು ನಿಷ್ಕ್ರಿಯವಾಗಿ ಕೂರಬೇಕಾಗಿರಲಿಲ್ಲ.

'ನೆಕ್ಸಲೈಟರು'ಗಳಂಥ ಉಗ್ರಗಾಮಿಗಳು ಹಲವು ಗುಂಪುಗಳಾಗಿ ಹಂಚಿಹೋಗುವುದು ಅವುಗಳ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ನಿಜಕ್ಕೂ ನೆಕ್ಸಲೈಟರುಗಳು ಒಂದಾದರೆ ಅವರ ಕಾರ್ಯವನ್ನು ತೀವ್ರಗೊಳಿಸಲಿ. ಅಹಿಂಸಾ ನೀತಿಯಿಂದ ಸ್ವಾತಂತ್ರ್ಯ ತಂದ ಈ ಗಾಂಧಿ ನಾಡಿನಲ್ಲಿ ಹಿಂಸೆಯಿಂದ ಸಮಾಜ ಸುಗಮಗೊಳ್ಳಬಹುದೋ? ಕಾದು ನೋಡೋಣ!

—ರಿ. ನಾ. ನಟರಾಜ

ಶೋಚನೀಯ

ಪ್ರಿಯರೆ,

ದಿನಾಂಕ 16-6-85ರ 'ವಾರದ ಮುಂಗಾರು'ವಿನಲ್ಲಿ ಪ್ರಕಟವಾದ ಭವಾನಿ ಶಂಕರ ಶಿರ್ವ ಅವರ 'ಕನಸುಗಳನ್ನು ಹೆಣೆಯುವ ಕಳಪೆ ಸಿನಿಮಾ' ಲೇಖನ ವಿಚಾರ ಪೂರ್ಣವಾಗಿತ್ತು.

— ಚಂದ್ರಹಾಸ ಶೆಟ್ಟಿ, ಮೂಡಿಗೆರೆ.

ಸೊಗಸಾಗಿತ್ತು

ಪ್ರಿಯರೆ,

ವಾರದ 'ಮುಂಗಾರು'ವಿನಲ್ಲಿ ಪ್ರಕಟವಾದ (16-6-85) ಶ್ರೀ ಭವಾನಿಶಂಕರ್ ಶಿರ್ವರವರ ಕ್ಯಾಬರೆ, ಡಿಶುಂ ಬಾತ್‌ರೂಂ ಬೆಡ್‌ರೂಂ...... ತುಂಬಾ ಸೊಗಸಾಗಿತ್ತು. ಆದರೆ ಲೇಖಕರ 'ಶಂಕರಾಭರಣಂ'ದ ಚಿತ್ರದ ಯಶಸ್ಸಿನ ಅಪನಂಬಿಕೆ ಸರಿಯಲ್ಲ. ಶಾಸ್ತ್ರೀಯ ಸಂಗೀತ, ಉತ್ತಮ ಕಥಾವಸ್ತು ಚಿತ್ರದ ಶತದಿನೋತ್ಸವಕ್ಕೆ ಕಾರಣವೆಂಬುವುದನ್ನು ಲೇಖಕರು ಮರೆತಂತಿದೆ. ಉಳಿದ ವ್ಯಾಪಾರಿ ದೃಷ್ಟಿಯ ಮಸಾಲೆ ಚಿತ್ರಗಳ ಟೀಕೆ ಸಮಂಜಸವೆನಿಸಿವೆ. ಇಲ್ಲದಿದ್ದರೆ ಕಥೆಗೆ ಪೂರಕವಲ್ಲದಿದ್ದರೂ ಜಯಮಾಲಿನಿ, ಅನುರಾಧ, ಸಿಲ್ಕ್‌ಸ್ಮಿತಾ, ಕಲ್ಪನಾ ಅಯ್ಯರ್‌ರವರ ಕ್ಲಬ್ ಡ್ಯಾನ್ಸ್‌ನ್ನು ತುರುಕುತ್ತಾರೆ. ಇನ್ನು ಪ್ರೇಕ್ಷಕರನ್ನು ರಂಜಿಸಲು ಶ್ರೀದೇವಿ, ಮಾಧವಿ, ರಾಧಾ, ಊರ್ವಶಿಯರ ಈ ಜಾಡುಗೆಯ ದೃಶ್ಯಗಳೂ ಕಡ್ಡಾಯವಾಗಿ (!) ಬೇಕೇ ಬೇಕು.

ಇಂಥ ವೈಚಾರಿಕ ಲೇಖನಗಳು ಹೆಚ್ಚು ಹೆಚ್ಚು ಮೂಡಿಬರಲಿ.

—ದಿನೇಶ್ ಕುಮಾರ್

ಮಕ್ಕಳಶಾಲೆ

ಭೂತ

ಮೂಢನಂಬಿಕೆಗಳು ಮನುಷ್ಯನನ್ನು ಕತ್ತಲೆಯ ಗುಹೆಯಲ್ಲಿರಿಸಿವೆ. ಬೆಕ್ಕು ಅಡ್ಡ ಹಾಯಬಾರದು, ಕಣ್ಣು ಹಾರಬಾರದು, ಹಲ್ಲಿ ಮೈಮೇಲೆ ಬೀಳಬಾರದು, ಕಾಗೆ ಮುಟ್ಟಿದರೆ ಸ್ನಾನ ಮಾಡಬೇಕು, ಪ್ರಯಾಣಕ್ಕೆ ಹೊರಟಾಗ ಖಾಲಿ ಕೊಡಪಾನ ಸಿಗಬಾರದು, ಹೆಣ ಸಿಕ್ಕಿದರೆ ಒಳ್ಳೆಯದು, ಮಾಟ ಮಂತ್ರ ಪೂಜಿಸುವುದು- ಹೀಗೆಲ್ಲ ಇದೆ. ಇವುಗಳೆಲ್ಲ ಸುಳ್ಳು.

ಇದರಲ್ಲಿ ಬಹಳ ಮುಖ್ಯವಾದದ್ದೆಂದರೆ ಭೂತ, ಪ್ರೇತ, ಪಿಶಾಚಿಗಳ ಕುರಿತು ನಂಬಿಕೆ. ಹಳ್ಳಿಗಳಲ್ಲಿ ಭೂತದ ಗುಡಿಗಳನ್ನು ಕಟ್ಟಿರುತ್ತಾರೆ. ಅಲ್ಲಲ್ಲಿ ಭೂತದ ಕಲ್ಲುಗಳನ್ನು ನೆಟ್ಟಿರುತ್ತಾರೆ. ಈ ಭೂತಗಳಿಗೆ ಕೋಳಿ, ಕುರಿಗಳನ್ನು ಬಲಿಯಾಗಿ ಅರ್ಪಿಸುತ್ತಾರೆ. ವಾರಿಗೆ ಕೋಣಗಳನ್ನು ಕಡಿಯುತ್ತಾರೆ.

ಭೂತ ಮೈಮೇಲೆ ಬರುತ್ತದೆ ಮತ್ತು ಮಾತನಾಡುತ್ತದೆ. ನಮ್ಮ ಆಸೆಗಳನ್ನು ಬಯಕೆಗಳನ್ನು ಈಡೇರಿಸಲಾಗದಿದ್ದರೆ ಮನಸ್ಸಿನಲ್ಲಿ ಕಟ್ಟಿಕೊಂಡರೆ ಒತ್ತಡ ಜಾಸ್ತಿಯಾಗುತ್ತಾ ಹೋಗುತ್ತದೆ. ಮಿತಿಮೀರಿ ತಿಂದರೆ ವಾಂತಿಯಾಗುತ್ತದೆ. ಹಾಗೇ ಮನಸ್ಸಿಗೆ ಅಜೀರ್ಣವಾದಾಗ ಮನಸ್ಸಿನಲ್ಲಿ, ಹೇಳದೆ ಗುಟ್ಟು ಮಾಡಿರಿಸಿದ ವಿಷಯಗಳು ರೂಪ ಬದಲಾಯಿಸಿ ಹೊರಬರುತ್ತವೆ.

ಮನೆಯಲ್ಲೊಬ್ಬಳು ಹುಡುಗಿ ಇದ್ದಾಳೆ. ಅವಳಿಗೆ 28 ವರ್ಷ ಆದರೂ ಮದುವೆ ಆಗಿಲ್ಲ. ಮದುವೆ ಆಗಲು ಅವಳಿಗೆ ಆಸೆ. ಆದರೆ ಹೇಳಲಾರಳು. ಗಂಡು ಸಿಗುತ್ತಿಲ್ಲ. ಅವಳು ಕಟ್ಟಿಕೊಂಡ ಈ ಆಸೆ ಬೇರೆ ರೂಪದಲ್ಲಿ ಹೊರಬೀಳುತ್ತದೆ. ಅವಳು ಬಡಬಡಿಸಿ ಮಾತನಾಡುತ್ತಾಳೆ. ತಮ್ಮ ಮನೆಯ ಸತ್ತವರ ಹೆಸರಿನಲ್ಲಿ ಮಾತನಾಡಿ ಸುತ್ತು ಬಳಸಿ ತನ್ನ ಆಶೆಗಳನ್ನು ಹೊರಹಾಕುತ್ತಾಳೆ. ಕೆಲವೊಮ್ಮೆ ನಮ್ಮ ಈಡೇರದ ಆಸೆಗಳು ರಾತ್ರಿ ಕನಸಾಗಿ ಬರುವುದಿಲ್ಲವೇ? ಹಾಗೆ.

ಈ ರೀತಿ ಸಮಸ್ಯೆಗಳಿದ್ದವರು ಅವರ ಮನೆಯವರು ಯಾವುದಾದರೂ ಭೂತವನ್ನು ನಂಬುತ್ತಾರಾದರೆ ತಮ್ಮ ಆಶೆಗಳನ್ನು ಹೇಳಲು ಆ ಭೂತದ ಹೆಸರನ್ನು ಬಳಸುತ್ತಾರೆ. ಈ ರೀತಿ ಆಸೆಗಳು ಹೊರಬರುವುದು ಅವರಿಗೆ ಗೊತ್ತಿದ್ದು ಅಲ್ಲ. ಅವರಿಗೆ ಇದು ಏಕೆ ಹೀಗೆ ಎಂದು ಅರ್ಥವಾಗದಿರಬಹುದು. ಒಟ್ಟಿನಲ್ಲಿ ಅಜೀರ್ಣವಾದ ಮನಸ್ಸು ವಾಂತಿ ಮಾಡುತ್ತದೆ.

ಹಳ್ಳಿಗಳಲ್ಲಿ ದೇವರ ಮುಂದೆ ದರ್ಶನ ಮಾಡುವ ಪಾತ್ರಿ ಭವಿಷ್ಯ ಹೇಳುತ್ತಾನೆ. ನೀವು ಗಮನಿಸಿದ್ದೀರಾ? ಅವನು ಹೇಳುವ ಉತ್ತರಗಳು ಅಡ್ಡ ಗೋಡೆಯ ಮೇಲಿಟ್ಟ ದೀಪದಂತಿರುತ್ತವೆ. ಹೇಳಿದ ಕೆಲಸ ಆಗುತ್ತದೆ. ಒಳ್ಳೆಯದು ಮಾಡುತ್ತೇನೆ ಅನ್ನುತ್ತಾನೆ. ಇವೆಲ್ಲ ಜಾರಿಕೆಯ ಉತ್ತರಗಳು. ಕಳೆದು ಹೋದ ಮಗನ ಬಗ್ಗೆ ಅವನು ಉತ್ತರ ದಿಕ್ಕಿನ ಊರಿನಲ್ಲಿದ್ದಾನೆಂದೂ, ನೀವು ನನಗೆ ಕಾಣಿಕೆ ಕೊಟ್ಟರೆ ರಕ್ಷಿಸುತ್ತೇನೆಂದೂ ಹೇಳುತ್ತಾನೆ. ಕಾಣಿಕೆಕೊಟ್ಟರೂ ಬರುವುದಿಲ್ಲ ಅಂತ ಭಾವಿಸಿ ಮುಂದಿನ ವರ್ಷದ ದರ್ಶನದಲ್ಲಿ ಅದೇ ಪ್ರಶ್ನೆ ಕೇಳಿದಾಗ ನೀವು ನಂಬಿದ್ದು ಸರಿಯಾಗಿಲ್ಲವೆನ್ನುತ್ತಾನೆ. ಹೀಗೆ ಇಲ್ಲಿಯ ಮಾತುಗಳೆಲ್ಲ ಜಾರಿಕೆಯ ಮಾತುಗಳು ಕೆಲವೊಮ್ಮೆ ಅದನು ಸುಳ್ಳನ್ನೂ ಹೇಳುತ್ತಾನೆ. ಅಂತಹ ಸಂದರ್ಭದಲ್ಲಿ ನೆನೆದ ಕೆಲಸ ಆಗದಿದ್ದರೆ ನಮ್ಮ ಕರ್ಮ ಎಂದು ಕೊಳ್ಳುತ್ತೇವೆ. ಮೈಮೇಲೆ ಬಂದವ ಸುಳ್ಳು ಹೇಳಿದ ಅಂತ ನಾವು ಹೇಳುವುದಿಲ್ಲ.

ಹಿಂದಿನ ಹಳ್ಳಿಗಳಲ್ಲಿ ಮೈಮೇಲೆ ಬರುತ್ತಿದ್ದವನಿಗೆ ಹಳ್ಳಿಯ ಪ್ರತಿಯೊಬ್ಬನ ಮನೆಯ ಕತೆಯೂ ಗೊತ್ತಿರುತ್ತಿತ್ತು. ಇದರಿಂದಾಗಿ ಅವನಿಗೆ ಅಂದಾಜಿನ ಮೇಲೆ ಗುಂಡು ಹೊಡೆಯುವುದು ಸಾಧ್ಯವಿತ್ತು.

ಹಿಂದೆ ಜಮೀನುದಾರರು ತಮ್ಮ ಒಕ್ಕಲುಗಳನ್ನು ಹಿಡಿತದಲ್ಲಿಟ್ಟು ಹಿಡಿತದಲ್ಲಿಟ್ಟುಕೊಳ್ಳಲು ಮೈಮೇಲೆ ಬರುವ ವ್ಯಕ್ತಿಯನ್ನು ಉಪಯೋಗಿಸಿ ಕೊಳ್ಳುತ್ತಿದ್ದರು. ಭೂತದ ಮೂಲಕ ಆಜ್ಞೆ ಮಾಡಿಸಿ ಹಳ್ಳಿಯನ್ನು ಆಳುತ್ತಿದ್ದರು. ಜನರಿಂದ ಬಡವರಾದಷ್ಟು ಅವರ ಮೇಲಿನ ಹಿಡಿತ ಜಾಸ್ತಿಯಾಗುತ್ತಿತ್ತು.

ಭೂತದ ಕುರಿತ ನಂಬಿಕೆ ಕೆಳಜಾತಿಯ ಜನರಲ್ಲಿ ಹೆಚ್ಚು. ಮೇಲುಜಾತಿಯ ಜನರೆಲ್ಲ ತೆಂಗಿನ ಕಾಯಿ, ಬಾಳೆಹಣ್ಣು ತಿನ್ನುವ ಕೃಷ್ಣ, ವಿಷ್ಣು, ಶಿವನನ್ನು ಪೂಜಿಸುತ್ತಾರೆ. ಜಾತಿಯ ಅಂತಸ್ತಿನಲ್ಲಿ ಕೆಳಗೆ ಬಂದ ಹಾಗೆ ದೇವತೆಗಳು ಭೂತಗಳಾಗಿ ಕಠೋರವಾಗುತ್ತ ಹೋಗುತ್ತಾರೆ. ಚುನಾವಣೆಗಳಲ್ಲಿ ಇಂತಹದೇ ಪಕ್ಷಕ್ಕೆ ಓಟು ಹಾಕಲು ಭೂತಗಳನ್ನು ಉಪಯೋಗಿಸಿಕೊಳ್ಳುತ್ತಾರೆ.

ಭೂತ, ವರ್ತಮಾನ, ಭವಿಷ್ಯದಲ್ಲಿ ಭೂತ ಅಂದರೆ ಆಗಿಹೋಗಿದ್ದು ಎಂದು ಅರ್ಥವಲ್ಲವೆ? ನಮ್ಮೊಳಗಿರುವ ಆಗಿ ಹೋದ ಸಂಗತಿಗಳೇ ಭೂತ.

ಕೈ ಕಾಲು ಬಿದ್ದು ಹೋಗಲಿ ಅಂತ ಮಾಟ ಮಂತ್ರ ಮಾಡಿದ್ದಾರೆಂಬುದನ್ನು ತಿಳಿದ ಮನುಷ್ಯ ನನ್ನ ಕೈ ಕಾಲು ಬಿದ್ದು ಹೋಗಲಿ ಅಂತ ಮಾಟ ಮಂತ್ರ ಮಾಡಿದ್ದಾರೆ ಎಂದು ಕೊಳ್ಳುತ್ತಲೆ ಅವನ ಕೈ ಕಾಲು ಬಿದ್ದು ಹೋಗುತ್ತದೆ. ನಮ್ಮ ಮನಸ್ಸು ಇಡೀ ದೇಹವನ್ನು ಕಂಟ್ರೋಲ್ ಮಾಡುತ್ತದೆ. ಅಥವಾ ಈ ಮನುಷ್ಯ ತನ್ನ ಕೈ ಕಾಲು ಬಿದ್ದು ಹೋಗದಿರುವಂತೆ ಪ್ರತಿ ಮಾಟ ಮಾಡಿಸಿದರೆ ಅವನ ಮನಸ್ಸು ನನ್ನ ಕೈ ಕಾಲು ಬಿದ್ದು ಹೋಗುವುದಿಲ್ಲ ಎಂದು ಹೇಳುತ್ತಾ ಹೇಳುತ್ತಾ ಆಶಾವಾದಕ್ಕೆ ಕಾರಣವಾಗುತ್ತದೆ. ಅವನ ಮನಸ್ಸು ದೇಹಕ್ಕೆ ಹಾಗಾಗದಂತೆ ಆಜ್ಞೆ ನೀಡುತ್ತದೆ.

ಮನುಷ್ಯ ವಿಚಾರವಂತನಾಗಬೇಕು

—ಭವಾನಿಶಂಕರ್ ಶಿರ್ವ

"ತಿನ್ನದ ದೇವರು"

ಅಮ್ಮನು ನಿತ್ಯವು ಅನ್ನವ ತಂದು।
ದೇವರ ಮುಂದಕೆ ಇರಿಸುತ್ತಾಳೆ॥
ದೇವರು ಏನನು ತಿಂದುದು ಇಲ್ಲ।
ಅಮ್ಮನು ತರುವುದ ಬಿಡುವಂತಿಲ್ಲ॥
ಹಬ್ಬದ ದಿವಸಕೆ ಮಾಡಿದುದೆಲ್ಲ।
ದೇವರ ಮುಂದಕೆ ಇರಿಸುವಳೆಲ್ಲ॥
ತರತರ ಪರಿಮಳ ಉಂಡೆಯನೆಲ್ಲ।
ದೇವರು ಎಂದೂ ತಿಂದುದೆ ಇಲ್ಲ॥
ಊರಿನ ಕುರುಡನು ತಿಮ್ಮನು ನಿತ್ಯ।
ಬಿಸಿಲಿನ ಹೊತ್ತಿಗೆ ಬರುತಿಹನಲ್ಲ॥
ತಿಮ್ಮನು ಬರುವುದ ಬಿಟ್ಟಿದ್ದಿಲ್ಲ।
ಅಮ್ಮನು ಏನನು ಕೊಟ್ಟಿದ್ದಿಲ್ಲ॥
ಅಮ್ಮನ ಪೂಜೆಯ ಗುಟ್ಟಿನಗಿಂದು।
ಮನಸಿಗೆ ಬಂದಿದೆ, ಹೌದೋ ಅಲ್ಲ॥
ತಿಂಬುವ ದೇವರು ಅಮ್ಮಗೆ ಸಲ್ಲ।
ತಿನ್ನದ ದೇವರ ನಂಬುವಳೆಲ್ಲ॥

: ಉಮೇಶ ಮಡಿವಾಳ
ಹೆಜಮಾಡಿ

ಪುಟಾಣಿ ಚಿತ್ರ

ವಿನಯ ಬೆಂಗಳೂರು

ಆಶಾಶೆಟ್ಟಿ ಉಡುಪಿ

ಶ್ವೇತ ಕೆ. ಪಿ. ಉಡುಪಿ



ಈ ಮಣ್ಣಿನ ಹಸಿರು ಹೊನ್ನು - ರಬ್ಬರ್

(ಒಂದನೆ ಪುಟದಿಂದ)

ಸೂಕ್ತ ಸಮಯ

ವರ್ಷದ ಸೆಪ್ಟೆಂಬರ್ ಮತ್ತು ಡಿಸೆಂಬರ್ ತಿಂಗಳುಗಳು ಅತೀ ಹೆಚ್ಚು ರಬ್ಬರ್ ಹಾಲು ಸಂಗ್ರಹವಾಗುವ ತಿಂಗಳುಗಳಾಗಿದ್ದು ಈ ಸಮಯದಲ್ಲಿ ದಿನವೊಂದಕ್ಕೆ ಸರಾಸರಿ 30,000 ಲೀಟರ್ ಲ್ಯಾಟೆಕ್ಸ್ ಸಂಗ್ರಹವಾಗುತ್ತದೆ. ಮಳೆಗಾಲದಲ್ಲಿ ಇದರ ಪ್ರಮಾಣ ದಿನವೊಂದಕ್ಕೆ ಸರಾಸರಿ 5,000 ಲೀಟರಿಗೂ ಇಳಿಯುವ ಸಾಧ್ಯತೆ ಉಂಟು ಎನ್ನುತ್ತಾರೆ ಇಲ್ಲಿನ ಕಾರ್ಮಿಕರು.

ವರ್ಷದ ಫೆಬ್ರವರಿ ಮಾರ್ಚ್ ತಿಂಗಳುಗಳ 20-30 ದಿವಸಗಳಲ್ಲಿ ಮಾತ್ರ ಹಾಲು ಸಂಗ್ರಹಣಾ ಕಾರ್ಯವನ್ನು ನಿಲ್ಲಿಸಲಾಗುತ್ತದೆ. ಈ ಸಮಯದಲ್ಲಿ ರಬ್ಬರ್ ಮರಗಳ ಎಲೆಗಳೆಲ್ಲ ಉದುರಿ ಹೊಸ ಚಿಗುರು ಚಿಗುರುತ್ತಿರುತ್ತದೆ.

ಸುಧಾರಿತ ರಬ್ಬರ್ ತಳಿಗಳನ್ನು ನಾಟಿ ಮಾಡಿದರೆ, ಇದರ ಫಸಲು ಹೆಕ್ಟೇರಿಗೆ 1,000 ಕಿಲೋವರೆಗೆ ಸಿಗುವ ಸಾಧ್ಯತೆ ಉಂಟು ಎನ್ನುತ್ತಾರೆ ಇಲ್ಲಿನ ರಬ್ಬರ್ ತಜ್ಞರು. ಈಗ ಪ್ರಮಾಣ ಹೆಕ್ಟೇರಿಗೆ 770 ಕಿಲೋ. ರಾಷ್ಟ್ರೀಯ ಸರಾಸರಿ ಹೆಕ್ಟೇರಿಗೆ 850 ಕಿಲೋ.

ಖಾಸಗಿ ರಬ್ಬರ್ ಕೃಷಿ

ಖಾಸಗಿ ರಬ್ಬರ್ ತೋಟಗಳಲ್ಲಿ ಫಸಲಿನ ಪ್ರಮಾಣ ಅಧಿಕವಾಗಿದ್ದು ಇಲ್ಲಿ ಪ್ರತಿಯೊಬ್ಬ ಹಾಲು ಸಂಗ್ರಾಹಕ ನಿತ್ಯ 400–450 ಮರಗಳ ಹಾಲು ಸಂಗ್ರಹಿಸುತ್ತಾನೆ. ಇತ್ತೀಚೆಗೆ ಸುಳ್ಯ, ಪುತ್ತೂರು, ಕುಂದಾಪುರ ತಾಲೂಕುಗಳಲ್ಲಿ ಬೃಹತ್ ಪ್ರಮಾಣದಲ್ಲಿ ರಬ್ಬರ್ ಕೃಷಿ ಪ್ರಾರಂಭವಾಗಿದೆ. ಸರ್ಕಾರ ರಬ್ಬರ್ ಕೃಷಿಗೆ ವಿವಿಧ ಬಗೆಯ ಆರ್ಥಿಕ ಸಹಾಯ ನೀಡುತ್ತಿರುವುದು ಇದಕ್ಕೆ ಕಾರಣವಾಗಿದೆ. ಒಂದು ಅಂದಾಜಿನ ಪ್ರಕಾರ ಒಂದು ರಬ್ಬರ್ ಮರದಿಂದ ದಿನಕ್ಕೆ ಸರಾಸರಿ ಒಂದು ರೂಪಾಯಿ ಲಾಭವಿದೆ.

ಕಾರ್ಮಿಕ ವರ್ಗ

ಇಲ್ಲಿನ ರಬ್ಬರು ತೋಟಗಳಲ್ಲಿನ ಕಾರ್ಮಿಕ ವರ್ಗ ಮುಖ್ಯವಾಗಿ ಶ್ರೀಲಂಕಾದಿಂದ ಬಂದ ಭಾರತೀಯ ನಿರ್ವಾಸಿತರು. ಕೆಲವು ಸಣ್ಣಪುಟ್ಟ ತಾತ್ಕಾಲಿಕ ಕೆಲಸಗಳಿಗೆ ಮಾತ್ರ ಸ್ಥಳೀಯರನ್ನು ನೇಮಕ ಮಾಡಿದ್ದಾರೆ.

ಹಾಲು ಸಂಗ್ರಾಹಕರ ದಿನಗೂಲಿಯನ್ನು 1973ರಿಂದಲೂ ಹೆಚ್ಚಿಸಲಾಗುತ್ತಿದ್ದು ಈ ವರ್ಷದ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ನಡೆದ ಕಾರ್ಮಿಕ ಮುಷ್ಕರದ ನಂತರ ಹಾಲು ಸಂಗ್ರಾಹಕರ ದಿನಗೂಲಿಯನ್ನು 9 ರೂಪಾಯಿಗಳಿಂದ 10-50ಕ್ಕೆ ಏರಿಸಲಾಗಿದೆ. ಇದೇ ರೀತಿ ಪ್ರತಿಯೊಬ್ಬ ಕಾರ್ಮಿಕನಿಗೂ ಮಾದರಿ ಉತ್ಪನ್ನ ದರ 1-70 ಮತ್ತು ಪೂರ್ವ ನಿಗದಿತ ಕನಿಷ್ಠ ರಬ್ಬರ್ ಹಾಲಿಗಿಂತ ಹೆಚ್ಚು ತಂದವರಿಗೆ ಕಿಲೋ ಒಂದಕ್ಕೆ ಒಂದು ರೂಪಾಯಿ ಮತ್ತು ಗುಜರಿ ರಬ್ಬರಿಗೆ ಕಿಲೋ ಒಂದಕ್ಕೆ 50 ಪೈಸೆ ನೀಡಲಾಗುವುದು ಎನ್ನುತ್ತಾರೆ ಸುಳ್ಯ ವಿಭಾಗೀಯ ನಿರ್ವಾಹಕರಾದ ಕೆ. ಸಿ. ಸುಬ್ಬಯ್ಯ ಅವರು.

ಪ್ರತಿ ಕಾರ್ಮಿಕ ಕುಟುಂಬಕ್ಕೆ ರಬ್ಬರ್ ತೋಟಗಳ ಸನಿಹದಲ್ಲಿಯೇ ವಾಸದ ಮನೆಗಳನ್ನು ನೀಡಿದ್ದು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ಸ್ಥಾಪಿಸಲಾಗಿದೆ. ಮೂಲತಃ ತಮಿಳು ಮಾತೃಭಾಷೆಯ ಕಾರ್ಮಿಕರ ಮಕ್ಕಳು ಇಲ್ಲಿ ಕನ್ನಡ ಕಲಿಯುತ್ತಿದ್ದಾರೆ. ತಮಿಳು ಭಾಷಾ ಬೋಧನೆಗಾಗಿ ತಮಿಳು ಶಿಕ್ಷಕರನ್ನು ನೇಮಿಸಲಾಗಿದೆ. ಇದೇ ರೀತಿ ಕಾರ್ಮಿಕರ ಆರೋಗ್ಯ ಪಾಲನೆಗಾಗಿ ಒಬ್ಬ ವೈದ್ಯರನ್ನು ಇಲ್ಲಿ ನೇಮಿಸಲಾಗಿದೆ.

ಪ್ಲಾಂಟೇಷನ್ ಕಾರ್ಮಿಕ ಕಾಯಿದೆ ರಬ್ಬರ್ ತೋಟ ಕಾರ್ಮಿಕರಿಗೂ ಅನ್ವಯಿಸುತ್ತಿದ್ದು ಇಲ್ಲಿ ಗಂಡು - ಹೆಣ್ಣುಗಳೆಂಬ ಭೇದವಿಲ್ಲದೆ ಸರಿಸಮನಾದ ಕೂಲಿಯನ್ನು ನೀಡಲಾಗುತ್ತಿದೆ. ಇದರೊಂದಿಗೆ ಮಹಿಳೆಯರಿಗೆ ಹೆರಿಗೆ ಭತ್ಯೆ, ಸಣ್ಣಮಕ್ಕಳ ಪಾಲನೆಗಾಗಿ ಬಾಲವಾಡಿ ಕೇಂದ್ರ ಹಸುಳೆಗಾಗಿ ಹಾಲು ಮತ್ತಿತರ ಪೌಷ್ಟಿಕಾಂಶಗಳು ಈ ರೀತಿ ಹಲವು ಸೌಲಭ್ಯಗಳನ್ನು ಕಾರ್ಮಿಕರಿಗೆ ಒದಗಿಸಲಾಗಿದೆ ಎನ್ನುತ್ತಾರೆ ನಿಗಮದ ಅಧಿಕಾರ ವರ್ಗದವರು.

ಎಲ್ಲ ಕಾರ್ಮಿಕರಿಗೂ ವರ್ಷಕ್ಕೆರಡು ಕಂಬಳಿ, ಮಳೆಗಾಲದ ಗೊರಬನ್ನು ನೀಡಲಾಗುವುದಲ್ಲದೆ ಕಾನೂನು ಪ್ರಕಾರ ಶೇಕಡ 8.33 ಬೋನಸನ್ನು ನೀಡಲಾಗುತ್ತಿದೆ ಎನ್ನುತ್ತಾರೆ ಅವರು.

ಕಾರ್ಮಿಕರಿಗೆ ವಂಚನೆ?

ಆದರೆ ಇಲ್ಲಿನ ಕಾರ್ಮಿಕ ವರ್ಗ ಆಡಳಿತ ವರ್ಗದ ಬಗ್ಗೆ ಸಮಾಧಾನ ಹೊಂದಿರುವಂತೆ ಕಂಡು ಬರುವುದಿಲ್ಲ. ಹಾಲು ಸಂಗ್ರಾಹಕರಿಂದ ಪ್ರತಿದಿನ ಸಂಗ್ರಹಿಸುವ ಹಾಲಿನ ಅಳತೆಯಲ್ಲಿ ಕಾರ್ಮಿಕರಿಗೆ ಮೋಸ ಮಾಡಲಾಗುತ್ತಿದೆ ಎನ್ನುತ್ತಾರೆ ಇಲ್ಲಿನ ತೋಟ ಕೆಲಸಗಾರರ ಸಂಘದ ಅಧ್ಯಕ್ಷರಾದ ನ್ಯಾಯವಾದಿ ಕೆ. ಸೂರ್ಯನಾರಾಯಣ್ ಭಟ್ ಅವರು.

ಹಾಲು ಸಂಗ್ರಾಹಕನಿಗೆ ಆತ ಸಂಗ್ರಹಿಸಿದ ರಬ್ಬರ್ ಹಾಲಿನಲ್ಲಿದ್ದ ಒಣರಬ್ಬರ್ ಅಂಶದ ಆಧಾರದ ಮೇಲೆ ಮಾದರಿ ಉತ್ಪನ್ನದರ ಮತ್ತು ಹೆಚ್ಚುವರಿ ಕೂಲಿಯನ್ನು ನೀಡಲಾಗುತ್ತಿದ್ದು ಈ ಒಣರಬ್ಬರ್ ಅಂಶವನ್ನು 'ಮೆಟ್ರೊಲ್ಯಾಕ್' ಎಂಬ ಮಾಪನದಲ್ಲಿ ಅಳೆಯಲಾಗುತ್ತದೆ.

ಹಾಲು ಸಂಗ್ರಾಹಕನಿಂದ ಹಾಲು ಪಡೆಯುವಾಗ ಒಣರಬ್ಬರಿನ ಅಂಶ ಲೀಟರಿಗೆ 400 ಅಂಶ (ಇದು ಸಾಮಾನ್ಯ ಪ್ರಮಾಣ) ಎಂದು ಗುರುತಿಸಿದ್ದರೆ ಅದನ್ನು ಸಂಸ್ಕರಣ ಕೇಂದ್ರಕ್ಕೆ ನೀಡುವಾಗ 250 ಇಲ್ಲವೇ 300 ಅಂಶವೆಂದು ದಾಖಲಿಸಲಾಗುತ್ತದೆ. ಒಣರಬ್ಬರಿನ ಅಂಶದ ಆಧಾರದ ಮೇಲೆಯೇ ಸಂಬಳ ನೀಡುವುದರಿಂದ ತಮಗೆ ಅನ್ಯಾಯವಾಗುತ್ತಿದೆ ಎನ್ನುವುದು ಕಾರ್ಮಿಕರ ವಾದ.

ಕಾರ್ಮಿಕ ನಾಯಕರು ಮಾಡುವ ಇನ್ನೊಂದು ಪ್ರಮುಖ ಆಪಾದನೆ ಸುಳ್ಳು ಹಾಜರಾತಿ ಪಟ್ಟಿಯದು. ಇಲ್ಲಿ ಹಾಲು ಸಂಗ್ರಾಹಕರ ಮತ್ತು ಖಾಯಂ ನೌಕರರ ಹಾಜರಾತಿ ಪಟ್ಟಿಯನ್ನು ಮಾತ್ರ ಇರಿಸಲಾಗುತ್ತದೆ ವಿನಃ ತಾತ್ಕಾಲಿಕ ಬದಲಿ ಮತ್ತು ನೌಕರರ ಕೆಲಸದ ಬಗ್ಗೆ ಯಾವ ದಾಖಲೆಗಳಿಲ್ಲದಿರುವುದು ಹಣವಂಚನೆಗೆ ದಾರಿ ತೆರೆದಿದೆ ಎನ್ನುತ್ತಾರೆ ಅವರು.

ಒಬ್ಬ ಬದಲಿ ಕಾರ್ಮಿಕ ವಾರದಲ್ಲಿ ಎರಡು ದಿನ ಮಾತ್ರ ಕೆಲಸ ಮಾಡಿದರೂ ಅವನಿಗೆ ಪೂರ್ತಿ ವಾರದ ಹಾಜರಾತಿ ಹಾಕಿ ಹೆಚ್ಚುವರಿ ಸಂಬಳವನ್ನು ಸಂಬಂಧಿತ ಅಧಿಕಾರಿಗಳು ನುಂಗಿ ಹಾಕುತ್ತಾರೆ. ಇಂತಹ ಸುಳ್ಳು ಹಾಜರಾತಿ ಪಟ್ಟಿ ಪ್ರಕರಣ ತಮ್ಮಲ್ಲಿ ದಾಖಲೆಯಿದೆ ಎನ್ನುತ್ತಾರೆ ಕಾರ್ಮಿಕ ಮುಖಂಡರಾದ ತರುಣ ವಕೀಲ ಎಸ್. ಸೂರ್ಯನಾರಾಯಣ ಭಟ್ ಅವರು.

ಇಲ್ಲಿನ ಹಲವಾರು ಕಾರ್ಮಿಕರನ್ನು ಆ ಬಗ್ಗೆ ವಿಚಾರಿಸಿದಾಗ ಹಾಜರಾತಿ ಪಟ್ಟಿ ಬಗ್ಗೆ ತಮ್ಮ ಸಂಶಯ ವ್ಯಕ್ತಪಡಿಸುತ್ತಾರೆ. ಎಷ್ಟೊ ಸಂದರ್ಭದಲ್ಲಿ ಕೆಲಸಕ್ಕೆ ಹೋಗದ ಕಾರ್ಮಿಕನಿಗೂ ಸಂಬಳ, ಭತ್ಯೆ, ಬೋನಸ್ ಸಿಕ್ಕಿದೆ. ಕೆಲಸ ಮಾಡಿದವನು ಇದರಿಂದ ವಂಚಿತನಾಗಿದ್ದಾನೆ ಎನ್ನುತ್ತಾರೆ ಮೇದಿನಡ್ಕ ವಿಭಾಗದ ಕಾರ್ಮಿಕರೊಬ್ಬರು.

ವಸತಿ ಅವ್ಯವಸ್ಥೆ

ರಬ್ಬರು ತೋಟಗಳ ಸಮೀಪದಲ್ಲಿಯೇ ಕಾರ್ಮಿಕರಿಗೆ ವಸತಿ ಸೌಕರ್ಯ ಮಾಡಲಾಗಿದೆ ಎಂದು ಆಡಳಿತ ವರ್ಗದವರು ಹೇಳಿದರೂ ವಸ್ತುಸ್ಥಿತಿ ಹಾಗಿಲ್ಲ ಎನ್ನುತ್ತಾರೆ ಕಲ್ಲುಗುಂಡಿ ಕಾಲನಿಯ ಕಾರ್ಮಿಕರು. ಈ ಕಾಲನಿಯವರು ಸುಮಾರು 14 ಕಿ. ಮೀ ದೂರದ ಊರುಬೈಲು ಚೆಂಬು ತೋಟಕ್ಕೆ ಮುಂಜಾನೆ ಹೊತ್ತು ಕಾಲ್ನಡಿಗೆಯಲ್ಲಿ ಹೋಗಬೇಕು. ವಿಲಿಟರಿ ಗ್ರ್ಯಾಂಟ್ ಕಾಲನಿ ಕಾರ್ಮಿಕರು 7 ಕಿ. ಮೀ ದೂರದ ಕ್ಯೊಗೋಡಿ ಗೋಟಡ್ಕ ತೋಟಗಳಿಗೆ ಹೋಗಬೇಕು. ಈ ಎಲ್ಲ ಅನಾನುಕೂಲತೆಗಳ ಬಗ್ಗೆ ಆ ಕಾರ್ಮಿಕ ಸಂಘಗಳು ದೂರಿತ್ತಿದ್ದರೂ ಯಾವ ಬದಲಾವಣೆಯೂ ಆಗಿಲ್ಲ ಎನ್ನುವುದು ಅವರ ಅಸಮಾಧಾನ.

ಈ ಎಲ್ಲ ಕುಂದುಕೊರತೆಗಳ ನಡುವೆಯೂ ರಬ್ಬರ್ ಬೆಳೆ ಒಂದು ಲಾಭದಾಯಕ ಕೃಷಿ ಆಗಿದೆ. ಅನಿರೀಕ್ಷಿತ ಪ್ರತಿಕೂಲ ಇಲ್ಲದಿದ್ದಲ್ಲಿ ವಾರ್ಷಿಕವಾಗಿ 50 ಲಕ್ಷ ರೂಪಾಯಿ ಲಾಭ ಸಾಧ್ಯ ಎನ್ನುತ್ತಾರೆ ಸುಳ್ಯ ವಿಭಾಗೀಯ ನಿರ್ವಾಹಕ ಕೆ. ಸಿ. ಸುಬ್ಬಯ್ಯ. ದಿನನಿತ್ಯ ಇಲ್ಲಿ ಲಕ್ಷಾಂತರ ರೂಪಾಯಿಯ ಕಳ್ಳ ಸಾಗಾಣಿಕೆ ನಡೆಯುತ್ತಿದ್ದು ಈ ಬಗ್ಗೆ ಸರ್ಕಾರ ನಿಗೂಢ ಮೌನ ವಹಿಸಿದೆ.

ಮನುಷ್ಯನ ವಿವೇಚನ ರಹಿತವಾದ ಅರಣ್ಯ ನಾಶದಿಂದಾಗಿ ನಮ್ಮ ಹಸಿರು ಹೊನ್ನಿನ ಕಾಡುಗಳೆಲ್ಲಾ ಬರಿದಾಗಿ ಭವಿಷ್ಯವನ್ನು ಅಂಧಕಾರದಲ್ಲಿಟ್ಟಿರುವಾಗ ರಬ್ಬರ್ ಕೃಷಿ ಒಂದು ಭರವಸೆಯ ಆಶಾಕಿರಣವಾಗಿದೆ. ಸುಳ್ಯ ಮತ್ತು ಪುತ್ತೂರು ತಾಲೂಕುಗಳ ಗುಡ್ಡಗಳು ಇಂದು ಕಪ್ಪುಮಿಶ್ರಿತ ಹಸಿರಿನ ಮರದ ಕಾಡಿನಿಂದ ತುಂಬಿಕೊಂಡು ಅರಣ್ಯ ನಾಶದಿಂದ ಉದ್ಭವವಾಗಿರುವ ಆತಂಕಕ್ಕೆ ಸಮಾಧಾನ ಹೇಳುತ್ತಿದೆ. ನಾಡಿನ ಆರ್ಥಿಕ ಬದುಕಿಗೆ ಹೊಸದಿಕ್ಕು ತೋರುತ್ತಿರುವುದರ ಜತೆಗೆ ಪರಿಸರ ಮಾಲಿನ್ಯ ನಿರ್ಮೂಲನೆಯಲ್ಲೂ ಪರಿಣಾಮಕಾರಿ ಪಾತ್ರ ವಹಿಸುತ್ತಿರುವ ರಬ್ಬರ್ ಬೆಳೆ ಈ ಮಣ್ಣಿನ ಹಸಿರು ಹೊನ್ನು.



ರಬ್ಬರ್ ಬೆಳೆಯ ರೋಚಕ ಇತಿಹಾಸ

(ಒಂದನೆ ಪುಟದಿಂದ)

ನ್ನೆಲ್ಲಾ ಬ್ರಿಟನಿಗೆ ಕಳುಹಿಸುವುದು ಅನಿವಾರ್ಯವಾಗಿತ್ತು.

ರಬ್ಬರ್ ಕೈಗಾರಿಕೆಗಳ ಅಭಾವ

ಆ ಸಮಯದಲ್ಲಿ ಆರ್ಥಿಕವಾಗಿ ಅನುಕೂಲಕರವಲ್ಲದ ಈ ರಬ್ಬರ್ ಬೆಳೆ ನಿಧಾನವಾಗಿ ಭಾರತೀಯ ಕೃಷಿಕ್ಷೇತ್ರದಿಂದ ದೂರ ಸರಿಯಿತು. ಆದರೆ ಬ್ರಿಟನಿಗೆ ರಬ್ಬರ್ ಪೂರೈಸುತ್ತಿದ್ದ ಮಲೇಶಿಯಾ ಎರಡನೇ ಮಹಾ ಯುದ್ಧದಿಂದಾಗಿ ಜಪಾನಿನ ವಶವಾದ ಕಾರಣ ರಬ್ಬರ್ ಪೂರೈಕೆ ನಿಂತು ಹೋಗಿ ಮತ್ತೆ ಭಾರತದಲ್ಲಿ ಅದಕ್ಕೆ ಪ್ರೋತ್ಸಾಹ ಸಿಕ್ಕಿತು. ಸ್ವಾತಂತ್ರ್ಯ ನಂತರ ಸರ್ಕಾರ ನೀಡಿದ ವಿಶೇಷ ಪ್ರೋತ್ಸಾಹದಿಂದಾಗಿ ರಬ್ಬರ್ ಬೆಳೆ ಕ್ಷಿಪ್ರ ಪ್ರಗತಿ ಸಾಧಿಸಿದೆ.

ಮಳೆ ನೀರು ಹರಿದು ಹೋಗುವ ಕಡಿದಾದ ಗುಡ್ಡ ಪ್ರದೇಶ ರಬ್ಬರು ಬೆಳೆಗೆ ಪ್ರಶಸ್ತವಾದ ಸ್ಥಳ. ಆದರೆ ಜೇಡಿಯಾ ಆವೆ ಮಣ್ಣಿನ ಗುಡ್ಡಗಳ ಮೇಲ್ಮೈ ಇಳಿಜಾರಾಗಿದ್ದರೂ ನೀರು ಇಂಗಿ ಹೋಗುವುದಿಲ್ಲವಾದುದರಿಂದ ಇಂತಹ ಪ್ರದೇಶ ರಬ್ಬರ್ ಬೆಳೆಗೆ ಪ್ರತಿಕೂಲ.

ಸಮುದ್ರ ಮಟ್ಟದಿಂದ 450 ಮೀಟರ್‌ಗಳಿಗಿಂತಲೂ ಉನ್ನತವಾದ ಪ್ರದೇಶದಲ್ಲಿ ರಬ್ಬರ್ ಸೊಂಪಾಗಿ ಬೆಳೆಯಬಲ್ಲುದಾದರೂ ಇದು ಉಷ್ಣವಲಯದ ಬೆಳೆಯಾದುದರಿಂದ ಶೀತ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯಲಾರದು. ಕರ್ನಾಟಕದುದ್ದಕ್ಕೂ ಚಾಚಿರುವ ಪಶ್ಚಿಮ ಘಟ್ಟಗಳ ಪಶ್ಚಿಮಾರ್ಧ ರಬ್ಬರಿಗೆ ಸೂಕ್ತವಾದ ಜಾಗ.

ದ.ಕ. ರಬ್ಬರ್ ಬೆಳೆಗೆ ಉತ್ತಮ

ದಕ್ಷಿಣ ಕನ್ನಡ ಜಿಲ್ಲೆ ಕರ್ನಾಟಕದಲ್ಲಿಯೇ ರಬ್ಬರ್ ಬೆಳೆಗೆ ಅತ್ಯಂತ ಪ್ರಶಸ್ತವಾದ ಸ್ಥಳವಾಗಿದ್ದು ಈ ಕಾರಣದಿಂದಾಗಿ ರಾಜ್ಯದಲ್ಲಿಯೆ ಅತೀ ಹೆಚ್ಚು ವಿಸ್ತಾರ ಪ್ರದೇಶದಲ್ಲಿ ರಬ್ಬರ್ ಬೆಳೆಯುತ್ತಿರುವ ಜಿಲ್ಲೆ ದಕ್ಷಿಣ ಕನ್ನಡವೆಂಬ ಖ್ಯಾತಿ ಪಡೆದಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಳ್ಯ ತಾಲೂಕು ರಬ್ಬರ್ ಬೆಳೆಗೆ ಅತ್ಯುತ್ತಮ ಪ್ರದೇಶವೆಂದು ಗುರುತಿಸಲಾಗಿದ್ದು ಉಳಿದಂತೆ ಪುತ್ತೂರು, ಬೆಳ್ತಂಗಡಿ ಕಾರ್ಕಳ ಕುಂದಾಪುರಗಳು ಭಾಗಶಃ ರಬ್ಬರ್ ಬೆಳೆಗೆ ಅನುಕೂಲವಾದ ವಾತಾವರಣವನ್ನು ಪಡೆದಿವೆ. ಜಿಲ್ಲೆಯ ಹೆಚ್ಚಿನ ಭಾಗ ಸಮುದ್ರ ಮಟ್ಟದಿಂದ 450 ಮೀಟರಿನ ಒಳಗೇ ಇರುವುದರಿಂದ ರಬ್ಬರ್ ಬೆಳೆಗೆ ಅನುಕೂಲವೆನಿಸಿದೆ. ಆದರೆ ಉಪ್ಪಿನಂಶವುಳ್ಳ ಮಣ್ಣಿನ ಕರಾವಳಿಯ ಬಯಲು ಪ್ರದೇಶದಲ್ಲಿ ರಬ್ಬರ್ ಬೆಳೆಯಲಾರದು.

ರಬ್ಬರ್ ಉತ್ಪನ್ನ ಕಳೆದ ಮೂವತ್ತು ವರ್ಷಗಳಿಂದ ಬಹಳಷ್ಟು ಅಭಿವೃದ್ಧಿ ಹೊಂದಿದ್ದು 1955ರಲ್ಲಿ ಎಕರೆಗೆ 120 ಕಿಲೋಗ್ರಾಂ ಇದ್ದ ರಾಷ್ಟ್ರೀಯ ರಬ್ಬರ್ ಉತ್ಪನ್ನ ಈಗ ಎಕರೆಗೆ 320 ಕಿಲೋಗ್ರಾಂಗಳಿಗೇರಿದೆ. ಮಲೇಶಿಯಾದಂತಹ ರಾಷ್ಟ್ರದಲ್ಲಿ ಇದು ಎಕರೆಗೆ 320 ಕಿಲೋಗ್ರಾಂಗಳಷ್ಟು ಮುಂದುವರೆದಿದೆ.

1955ರಲ್ಲಿ ಭಾರತದ ಒಟ್ಟು ರಬ್ಬರ್ ತೋಟಗಳ ವಿಸ್ತಾರ ಕೇವಲ 80,000 ಹೆಕ್ಟೇರ್‌ಗಳಾಗಿದ್ದು ವಾರ್ಷಿಕ ಉತ್ಪನ್ನ ಸುಮಾರು 25,000 ಟನ್ನುಗಳಾಗಿತ್ತು. 1983–84ರ ಅವಧಿಯಲ್ಲಿ ನಮ್ಮ ರಬ್ಬರ್ ತೋಟಗಳ ವಿಸ್ತಾರ 2,63,076 ಹೆಕ್ಟೇರಿಗೇರಿದ್ದು, ಫಸಲಿಗೆ ಬಂದಿರುವ 2,03,800 ಹೆಕ್ಟೇರ್ ತೋಟಗಳಿಂದ ಲಭ್ಯವಾಗಿರುವ ಉತ್ಪನ್ನ 1,75,280 ಟನ್‌ಗಳು.

ರಬ್ಬರ್ ಬೆಳೆ ಭಾರತದಲ್ಲಿ ಮುಖ್ಯವಾಗಿ ತಮಿಳುನಾಡು, ಕೇರಳ, ಕರ್ನಾಟಕದಲ್ಲಿ ಕಂಡು ಬಂದರೂ, ಅಂಡಮಾನ್ ನಿಕೋಬಾರ್, ತ್ರಿಪುರ ಅಸ್ಸಾಂ ಮೇಘಾಲಯ, ಮತ್ತುಗೋವಾಗಳಲ್ಲಿಯೂ ರಬ್ಬರ್ ಕೃಷಿ ವಿರಳವಾಗಿ ಪ್ರಾರಂಭವಾಗಿದೆ. ಕರ್ನಾಟಕದಲ್ಲಿ ದಕ್ಷಿಣ ಜಿಲ್ಲೆಯೊಂದರಲ್ಲಿಯೇ 7,838 ಹೆಕ್ಟೇರ್ ಪ್ರದೇಶದಲ್ಲಿ ರಬ್ಬರ್ ತೋಟಗಳಿದ್ದು ಚಿಕ್ಕಮಗಳೂರಿನ 185 ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಕೊಡಗಿನ 1,442 ಹೆಕ್ಟೇರ್ ಪ್ರದೇಶದಲ್ಲಿ ಹೀಗೆ ಒಟ್ಟು ರಾಜ್ಯದ 9,465 ಹೆಕ್ಟೇರ್ ಪ್ರದೇಶದಲ್ಲಿ ರಬ್ಬರ್ ಕೃಷಿ ನಡೆಯುತ್ತಿದೆ.

ಬಹುಪಯೋಗಿ

ಭಾರತ ಸರ್ಕಾರ ರಬ್ಬರು ಉದ್ಯಮಕ್ಕೆ ಇದೀಗ ವಿಶೇಷ ಪ್ರೋತ್ಸಾಹ ನೀಡುತ್ತಿದ್ದು, ಬೃಹತ್ ಉದ್ಯಮಗಳ ಜತೆಗೆ ವಿವಿಧ ಬಗೆಯ ಗುಡಿಕೈಗಾರಿಕೆಗಳಿಗೂ ಧಾರಾಳ ಸಹಾಯಧನ ನೀಡುತ್ತಿದೆ. ದೇಶದಲ್ಲಿ ಭಾರೀ ಪ್ರಮಾಣದಲ್ಲಿ ಸ್ಥಾಪನೆಯಾಗಿರುವ ಟಯರು ಉತ್ಪಾದನಾ ಕಾರ್ಖಾನೆಗಳೇ ಬಹಳಷ್ಟು ರಬ್ಬರನ್ನು ಉಪಯೋಗಿಸುತ್ತಿದೆ.

ಇದೇ ರೀತಿ ಕೊಳವೆಗಳು, ನಳಿಕೆಗಳು, ಪಾದರಕ್ಷೆಗಳು, ವಿವಿಧ ಸಾಗಣೆ ಬೆಲ್ಟುಗಳು ಮೋಟಾರ್ ವಾಹನಗಳ ಬಿಡಿಭಾಗಗಳಾದ ಬುಶ್ ವಾಶರ್ ಸೀಲ್ ಕೇಸಿಂಗ್, ಟೊಪ್ಪಿಗೆ ರಬ್ಬರ್ ಬ್ಯಾಂಡ್ ನೂಲು ಟೇಪುಗಳು, ಕೈಚೀಲ ಬೆಲೂನ್ ನಿರೋಧ್‌ಗಳು, ರಬ್ಬರ್‌ಚಾಪೆ ಅಂಟು ಟೇಪು ಮುಂತಾದ ನಿತ್ಯಬಳಕೆಯ ವಸ್ತುಗಳಲ್ಲಿ ರಬ್ಬರ್ ಪ್ರಮುಖವಾಗಿ ಉಪಯೋಗಿಸಲ್ಪಡುತ್ತಿದೆ. ಈ ಕಾರಣದಿಂದಾಗಿ ರಬ್ಬರಿಗೆ ಈಗ ಭಾರೀ ಬೇಡಿಕೆಯಿದ್ದು ಇದು ಕೃಷಿ ರಬ್ಬರಿನ ಬಳಕೆಗೆ ದಾರಿ ಮಾಡಿದೆ.

ಮಂಗಳೂರು ಸಾಂಸ್ಕೃತಿಕ ಕೇಂದ್ರವಾಗಬೇಕು

—ಶ್ರೀನಿವಾಸ ಮುರ್ಡೇಶ್ವರ

'ಮಂಗಳೂರು ವಾಣಿಜ್ಯ ಕೇಂದ್ರವಾಗಿ ಬೆಳೆದಿದೆಯೇ ವಿನಹ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದಿಲ್ಲ. ಇಲ್ಲಿನ ಜನರು ಆ ಬಗ್ಗೆ ಇನ್ನೂ ಕಾಳಜಿ ವಹಿಸಿಲ್ಲ. ಸರಿಯಾದ ದಿಕ್ಕಿನಲ್ಲಿ ಯೋಚಿಸುತ್ತಿಲ್ಲ. ನನ್ನ ಹುಟ್ಟೂರು ಹೀಗೆ ಕಲಾರಾಧನೆಯಲ್ಲಿ ಬಡವಾಗಿರುವುದಕ್ಕೆ ವಿಷಾದವೆನಿಸುತ್ತದೆ'

ಖ್ಯಾತ ಚಿತ್ರ ಕಲಾವಿದ ಶ್ರೀನಿವಾಸ ಮುರ್ಡೇಶ್ವರರು ನೊಂದ ಮನಸ್ಸಿನಿಂದ ಹೀಗೆ ನುಡಿಯುತ್ತಾರೆ.

ಯಕ್ಷಗಾನವೊಂದು ಮಾತ್ರ ದಕ್ಷಿಣ ಕನ್ನಡದಲ್ಲಿ ಜನರನ್ನು ಪೂರ್ಣ ಪ್ರಮಾಣದಲ್ಲಿ ಆವರಿಸಿಕೊಂಡಿದೆ. ಸಂಗೀತ, ನಾಟಕ, ನೃತ್ಯ, ಚಿತ್ರಕಲೆ ಇವುಗಳಾವುವೂ ಜನರ ಹೃದಯದಲ್ಲಿ ಸೊಂಪಾಗಿ ಬೆಳೆದಿಲ್ಲ.

ಕಲಾವಿದರನ್ನು ವಿಕೃತವಾಗಿ ನೋಡುವ ರೀತಿ ಬದಲಾಗಬೇಕು. ಕಲಾವಿದರ ಜೀವನವನ್ನು ಅರಿತುಕೊಳ್ಳುವ ಪ್ರವೃತ್ತಿ ಬೆಳೆಯಬೇಕೆಂದೂ ಶ್ರೀನಿವಾಸ್ ಆಶಿಸುತ್ತಾರೆ.

ಕಲಾವಿದನಿಗೆ ವಿಶ್ರಾಂತಿ–ಶಾಂತಿಯ ಅವಶ್ಯಕತೆ ಬಹಳಷ್ಟಿದೆ. ಇವಿಲ್ಲವಾದರೆ ಆತನ ಪ್ರತಿಭೆ ಹೊರ ಹೊಮ್ಮಲು ಸಾಧ್ಯವಿಲ್ಲ. ಆತನು ವಾಸಿಸುವ ಪರಿಸರವೂ ಇಲ್ಲಿ ಮುಖ್ಯ. ಕಲಾವಿದರೆಲ್ಲರೂ ಒಂದೇ ಕಡೆಯಲ್ಲಿ ಬದುಕುವಂತಾದರೆ ಅವರಲ್ಲಿರುವ ಪ್ರತಿಭೆ ಮತ್ತಷ್ಟು ವಿಕಸನಗೊಳ್ಳುತ್ತದೆ ಎನ್ನುವ ಶ್ರೀನಿವಾಸ್ ಅವರು ಕಲಾವಿದರೆಲ್ಲರಿಗೆ ಒಂದೇ ಕಡೆ ವಾಸಮಾಡಲು ಸರ್ಕಾರ ಸ್ಥಳಾವಕಾಶ ಒದಗಿಸಿಕೊಡಬೇಕೆಂದು ಒತ್ತಾಯಿಸುತ್ತಾರೆ.

ನಾನೊಬ್ಬ ಕಲಾವಿದ ಎಂದು ಸಮಾಜಕ್ಕೆ ಗೊತ್ತಾಗಿ, ನನ್ನ ಚಿತ್ರಗಳಿಂದ ಸಮಾಜಕ್ಕೆ ಏನಾದರೂ ಉಪಕಾರವಾದರೆ ಸಾಕು ನನ್ನ ಜೀವನ ಸಾರ್ಥಕ ಎನ್ನುವ ಶ್ರೀನಿವಾಸರು ಅಂತರರಾಷ್ಟ್ರೀಯ ಮಟ್ಟದಲ್ಲೂ ಹೆಸರು ಗಳಿಸಿದವರು, ಜರ್ಮನಿ, ಇಟಲಿ ಇಂಗ್ಲೆಂಡ್‌ಗಳಲ್ಲಿಯೂ ತಮ್ಮ ಚಿತ್ರಗಳ ಪ್ರದರ್ಶನ ಏರ್ಪಡಿಸಿ ಜನ ಮನ್ನಣೆ ಗಳಿಸಿದವರು.

ಮುಂಬಯಿ, ಕಲ್ಕತ್ತ, ಮದರಾಸು, ಅಹ್ಮದಾಬಾದ್, ಹೊಸದಿಲ್ಲಿ, ಹೀಗೆ ಭಾರತದ ಪ್ರಮುಖ ಪಟ್ಟಣಗಳಲ್ಲೂ ಇವರು ಚಿತ್ರಗಳ ಪ್ರದರ್ಶನ ಏರ್ಪಡಿಸಿದವರು.

ಜಲವರ್ಣ ಮತ್ತು ಕ್ಯಾನ್‌ವಾಸ್ ಚಿತ್ರಗಳಲ್ಲಿ ಎತ್ತಿದ ಕೈ ಶ್ರೀನಿವಾಸರದ್ದು ವಾಸ್ತವಕ್ಕೆ ಹತ್ತಿರವಾದ, ಚಿಂತನೆಗೆ ಗರಿ ಮೂಡಿಸುವ ಚಿತ್ರಗಳ ಈ ಶಿಲ್ಪಿಯ ಜೀವನ ಹೂವಿನ ಹಾಸಿಗೆಯಾಗಿರಲಿಲ್ಲ.

ಬಾಲ್ಯದಿಂದಲೇ ಚಿತ್ರ ಬರೆಯುವ ಅದನ್ನು ನೋಡಿ ಆನಂದಿಸುವ ಇವರ ಹವ್ಯಾಸಕ್ಕೆ ಇರುವ ತಾಯಿಯ ಪ್ರೋತ್ಸಾಹವೂ ದೊರೆಯಿತು.

ಮಂಗಳೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ಇವರು ಮುಂಬಯಿ ಅಶ್ರೀ

ಕರ್ನ್ಸ್ ಅಕಾಡೆಮಿ ಆಫ್ ಆರ್ಟ್, ಮೋಡೆಲ್ ಆರ್ಟ್ ಇನ್‌ಸ್ಟಿಟ್ಯೂಟ್, ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ಗಳಲ್ಲಿ ಕಲಾ ವ್ಯಾಸಂಗ ಮಾಡಿದರು.

ಅಂದು ಚಿತ್ರಕಲೆಯನ್ನು ಅಭ್ಯಸಿಸಲು ವಿದ್ಯಾರ್ಥಿಗಳಿಗೆ ಯಾವೊಂದು ವಿಧವಾದ ಸೌಕರ್ಯವೂ ಇದ್ದಿಲ್ಲ. ಪ್ರೋತ್ಸಾಹವಂತೂ ಕೇಳಲೇಬಾರದು. ಆದರೆ ಈಗ ಪರವಾಗಿಲ್ಲ. ಆಸಕ್ತಿಯೂ ಹೆಚ್ಚಿರುವುದರಿಂದ ಪ್ರೋತ್ಸಾಹ ನೀಡುವವರೂ ತಲೆ ಎತ್ತಿದ್ದಾರೆ ಎನ್ನುತ್ತಾರೆ ಶ್ರೀನಿವಾಸ್.

ವಯಸ್ಸು 52 ದಾಟಿದ್ದರೂ ಶ್ರೀನಿವಾಸರ ಉತ್ಸಾಹ 25ರ ತರುಣನದ್ದೇ. ಈ ದೇಶದಲ್ಲಿ ನಿಜವಾದ ಕಲಾವಿದರಿಗೆ ಬದುಕುವುದು ಕಷ್ಟ ಎನ್ನುವ ಇವರು ಅದಕ್ಕಾಗಿ ಅಂಜಿ ತಮ್ಮ ಮಕ್ಕಳನ್ನು ಚಿತ್ರಕಲೆಯಿಂದ ದೂರವಿಟ್ಟಿಲ್ಲ.

ಇವರ ಹಿರಿಯ ಮಗಳು ಎಂಟು ವರ್ಷ ವಯಸ್ಸಿನ ರೇಖಾ ಈಗಾಗಲೇ ತಂದೆಯ ಪ್ರತಿಭೆ ತನಗೆ ಬಳುವಳಿಯಾಗಿ ಬಂದಿದೆ ಎಂದು ತೋರಿಸಿದ್ದಾಳೆ. ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದಾಳೆ. ಇವರ ಪುತ್ರ ರವೀಂದ್ರ ಎರಡನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಈತನೂ ಚಿತ್ರ ಬರೆಯುವ ಗೀಳಿನಿಂದ ಮುಕ್ತಿ ಹೊಂದಿಲ್ಲ.

ಮೂವರು ಮಕ್ಕಳು, ಹೆಂಡತಿ, ತಾಯಿ ಇವರೊಂದಿಗೆ ಮಂಗಳೂರಿನ ಜಪ್ಪು ಸೆಮಿನರಿಯಲ್ಲಿ ಪುಟ್ಟ ಮನೆಯೊಂದರಲ್ಲಿ ಶಾಂತಿಯುತ ಜೀವನ ನಡೆಸುತ್ತಿರುವ ಶ್ರೀನಿವಾಸರ ಆಕಾಂಕ್ಷೆ ಒಂದೇ 'ತನಗೊಂದು ಸ್ಟುಡಿಯೋ ಬೇಕು. ತನ್ನ ಉಳಿದ ಜೀವಿತವನ್ನು ಇನ್ನಷ್ಟು ಒಳ್ಳೆಯ ಕಲಾಕೃತಿಗಳನ್ನು ಹೊರತರಲು ಮುಡಿಪಾಗಿಡಬೇಕು' ಎಂಬುದಾಗಿ. ಸ್ಟುಡಿಯೋ ಅಂದರೆ ಫೋಟೋಗ್ರಾಫರ್ಸ್ ಸ್ಟುಡಿಯೊ ಅಲ್ಲ. ಓರ್ವ ಕಲಾವಿದ ಮುಕ್ತ ಮನಸ್ಸಿಂದ ವಿಹರಿಸುವಂತಿರುವ, ಗೌಜಿ ಗದ್ದಲದ ಸೋಂಕಿಲ್ಲದ, ತನ್ನ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲು ಸಾಧ್ಯವಾಗುವ ಸ್ಟುಡಿಯೋ ಎಂದು ಅವರು ಸ್ಪಷ್ಟೀಕರಿಸುತ್ತಾರೆ.

ಈ ಬಗ್ಗೆ ಮುಖ್ಯಮಂತ್ರಿಗಳಿಗೆ, ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೆ. ನನ್ನ ಆಶೆ ಇನ್ನೂ ಕೈಗೂಡಿಲ್ಲ ಎಂದು ದುಃಖಿಸುವ ಶ್ರೀನಿವಾಸ ಮುರ್ಡೇಶ್ವರರು 'ಹುಟ್ಟೂರಿನಲ್ಲಿ ನನ್ನ ಕಲೆ ನೆಲೆ ಕಂಡುಕೊಳ್ಳುವಂತಾಗಬೇಕು. ಇದು ನನ್ನ ಜತೆ ಮಣ್ಣಲ್ಲಿ ಮಣ್ಣಾಗಿ ಹೋಗದೆ, ಉಳಿದು ಇತರ ಕಲಾವಿದರಿಗೆ ಸಹಾಯಮಾಡುವಂತಾಗಬೇಕು' ಎಂದು ತುಂಬು ಕಳಕಳಿಯಿಂದ ಹೇಳುತ್ತಾರೆ.

—ಸುಧಾಕರ ಬನ್ನಂಜೆ



'ಜ್ವಾಲಾಮುಖಿ' ಚಿತ್ರದಲ್ಲಿ ಡಾ॥ ರಾಜ್‌ಕುಮಾರ್, ಲೀಲಾವತಿ, ಗಾಯತ್ರಿ

ಕನ್ನಡಿಗರಿಗೆ ಕನ್ನಡದಲ್ಲಿ ಪ್ರೋತ್ಸಾಹವಿಲ್ಲ

'ಕನ್ನಡ ಚಿತ್ರರಂಗ ಕನ್ನಡಿಗರ ಪ್ರತಿಭೆಗೆ ಸರಿಯಾದ ಪ್ರೋತ್ಸಾಹ ನೀಡುತ್ತಿಲ್ಲ. ಹೀಗಾಗಿ ಬೇರೆ ಭಾಷೆಗಳ ಚಿತ್ರಗಳಲ್ಲಿ ಅಭಿನಯಿಸ ಬೇಕಾಗುತ್ತದೆ. ಎಲ್ಲಿ ಮನ್ನಣೆ ದೊರೆಯುತ್ತದೆಯೇ ಅಲ್ಲಿಗೆ ಕಲಾವಿದ ಹೋಗಬೇಕು. ಇದು ತಪ್ಪಲ್ಲ' ಎಂದು ಖಡಾಖಂಡಿತವಾಗಿ ಹೇಳುತ್ತಾರೆ ಖ್ಯಾತ ಚಿತ್ರನಟ ಸುಂದರರಾಜ್.

ಬೇರೆ ಭಾಷೆಯ ಚಿತ್ರಗಳಲ್ಲಿ ಅಭಿನಯಿಸಿದಾಗ ನಮ್ಮ ಜನ ಹೇಳುತ್ತಾರೆ. 'ಅಗೋ ಅವ ಕನ್ನಡ ಮರೆತ' ಎಂಬುದಾಗಿ. ಚಿತ್ರರಂಗದಲ್ಲಿ ಅವಕಾಶ ಇಲ್ಲದೆ ನಾವು ಪರದಾಡುವ ಸ್ಥಿತಿ ಅವರಿಗೆ ಅರ್ಥವಾಗುವುದಿಲ್ಲ. ಮೊದಲು ನಾವು ಬದುಕಬೇಕು. ಆಮೇಲೆ ಮತ್ತೆಲ್ಲಾ ಎಂದು ಹೇಳುವ ಈ ಯುವ ಕಲಾವಿದನಿಗೆ ಭಾಷೆಯ ಬಂಧನ ಇರಬಾರದು ಎನ್ನುತ್ತಾರೆ.

ಕಾಲೇಜು ಶಿಕ್ಷಣದೊಂದಿಗೆ ಅಂಟಿಕೊಂಡ ನಾಟಕದ ಗೀಳು ಕಾಲೇಜ್ ಬಿಟ್ಟರೂ ಬಿಡಲು ಸುಂದರರಾಜ್ ಅವರಿಗಾಗಲಿಲ್ಲ. ಬೆನಕ ತಂಡದ ಸೇರಿ ಹಲವಾರು ನಾಟಕಗಳಲ್ಲಿ ಮಿಂಚಲಾರಂಭಿಸಿದ ಈ ತರುಣನಿಗೆ ತುಂಬು ಪ್ರೋತ್ಸಾಹ ನೀಡಿದವರು ಬಿ. ವಿ. ಕಾರಂತ್.



ಗಿರೀಶ್ ಕಾರ್ನಾಡರ 'ಕಾಡು' ಚಿತ್ರದಿಂದ ಚಿತ್ರನಟರಾದ ಸುಂದರರಾಜ್, ಬಿ. ವಿ. ಕಾರಂತರು ನಿರ್ದೇಶಿಸಿದ 'ಚೋಮನ ದುಡಿ'ಯಲ್ಲಿ ಸಕತ್ ಮಿಂಚಿದರು.

ತಬ್ಬಲಿಯು ನೀನಾದೆ ಮಗನೆ, ಒಂದಾನೊಂದು ಕಾಲದಲ್ಲಿ ಚಿತ್ರಗಳಲ್ಲಿ ನಟಿಸಿ, ಪ್ರೇಕ್ಷಕರು ಗುರುತಿಸುವಂತಾದ ಸುಂದರರಾಜ್ ಕಲಾತ್ಮಕ ಚಿತ್ರಗಳಿಗೆ ಲಾಯಕ್ಕು ಎಂದು ನಿರ್ಮಾಪಕರು ಭಾವಿಸುವಂತಾಯಿತು.

ಖ್ಯಾತ ನಿರ್ದೇಶಕ ಕೆ. ಬಾಲಚಂದರ್ ಅವರ 'ತಪ್ಪಿದ ತಾಳ'ದ ಮೂಲಕ ಕಮರ್ಷಿಯಲ್ ನಟ ಎನಿಸಿದ ಇವರಿಗೆ ಅನಂತರ ಸಾಲುಗಟ್ಟಿ ಚಿತ್ರಗಳು ಬಂದವು. "ಪ್ರಾಯ ಪ್ರಾಯ ಪ್ರಾಯ" ಒಂದರ ಹೊರತು ಮತ್ತಾವ ಚಿತ್ರದಲ್ಲೂ ಇವರ ಅಭಿನಯ ಹೊರಹೊಮ್ಮಲು ಅವಕಾಶವಾಗಲಿಲ್ಲ.

ಏನು ಕಾರಣವೋ ತಿಳಿಯದು. ಸುಂದರರಾಜ್ ಅವರಿಗೆ ಚಿತ್ರಗಳೇ ಇಲ್ಲ. ಸುಂದರ್ ರಾಜ್ ತಮಿಳಿಗೆ ಹಾರಿದರು. ಕಾಲ್‌ಶೀಟ್ ಕೊಡಲಿಲ್ಲ ಎಂದು ನಿರ್ಮಾಪಕರ ದೂರು. ಅವಕಾಶ ಸಿಗಲಿಲ್ಲ. ಆದಕ್ಕೆ ತಮಿಳಿಗೆ ಹೋದೆ. ಇದು ಸುಂದರ್ ವಾದ.

ಕನ್ನಡ ನನ್ನ ಮಾತೃಭಾಷೆ. ಈ ಭಾಷೆಯಲ್ಲಿ ನಟಿಸಲು ನಾನು ಸಂತೋಷ ಪಡುತ್ತೇನೆ ಎನ್ನುವ ಸುಂದರ ರಾಜ್ ಅವರಿಗೆ ಮಸಾಲೆ ಚಿತ್ರಗಳಿಗಿಂತಲೂ ಕಲಾತ್ಮಕ ಚಿತ್ರಗಳೇ ಹೆಚ್ಚು ಪ್ರಿಯವಂತೆ.

...ಗುರುದತ್ ಕೋಣಿ

ಕುಂಜಾಲು ಶೈಲಿಯ ಭಾಗವತ

ಶಂಕರನಾರಾಯಣ ಶ್ಯಾನಭೋಗ

ತರಬೇತಿ ತರಗತಿಯ ಒಂದು ದೃಶ್ಯ (ಬಲಕೊನೆಯಲ್ಲಿರುವವರು ಶ್ಯಾನಭೋಗ)

ಕರಾವಳಿ ಕರ್ನಾಟಕದ ಉತ್ಕೃಷ್ಟ ಜಾನಪದ ಕಲೆಯಾದ ಯಕ್ಷಗಾನದಲ್ಲಿ 'ಕುಂಜಾಲು' ಎಂಬ ಹೆಸರು ಮರೆಯಲಾರದ್ದು. 'ಕುಂಜಾಲು' ಭಾಗವತರುಗಳು ಹಾಡುಗಾರಿಕೆಯಲ್ಲಿ ತಮ್ಮತನದ ಮುದ್ರೆ ಒತ್ತಿದವರು. ಆದರೆ ಈ ಫ್ಯಾಶನ್ ಯುಗದಲ್ಲಿ ಸಿನಿಮಾ ದಾಟಿಯಲ್ಲಿ ಹಾಡುಗಳನ್ನು ಹಾಡುವವರಿಗೇ ಮರ್ಯಾದೆ. ಯಕ್ಷಗಾನ ತನ್ನ ಹಿಂದಿನ ಮೆರುಗನ್ನು ಇದು ಕಳೆದುಕೊಳ್ಳುವಂತೆ ಮಾಡಿದೆ. ಕುಂಜಾಲು ಭಾಗವತಿಕೆ ಕಣ್ಮರೆಯಾಗುತ್ತಿದೆ.

ಯಕ್ಷಗಾನದ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಕುಂಜಾಲು ಶೈಲಿಯನ್ನು ಮತ್ತೆ ಮೆರೆಸಲು ಹಟತೊಟ್ಟಿದ್ದಾರೆ ಇಪ್ಪತ್ತೈದರ ಹರೆಯದ ವಾಣಿಜ್ಯ ಪದವೀಧರ ಶೀರೂರು ಶಂಕರ ನಾರಾಯಣ ಶ್ಯಾನಭೋಗರು.

ಚಿಕ್ಕಂದಿನಿಂದಲೂ ಯಕ್ಷಗಾನದ ಬಗ್ಗೆ ಅತೀವ ಆಸಕ್ತಿ, ಪ್ರೀತಿ ಬೆಳೆಸಿಕೊಂಡಿದ್ದ ಶ್ಯಾನಭೋಗರು, ಆಟ, ತಾಳಮದ್ದಲೆಗಳನ್ನು ನೋಡಿ ಭಾಗವತಿಕೆಯ ಚಟ ಬೆಳೆಯಿಸಿಕೊಂಡವರು. ಪ್ರಾಥಮಿಕ ಶಾಲೆಯಲ್ಲಿರುವಾಗಲೇ, ಶಾಲಾ ವಾರ್ಷಿಕೋತ್ಸವಗಳಲ್ಲಿ ಭಾಗವತಿಕೆ ಮಾಡಿದವರು.

ಯಕ್ಷಗಾನದ ಗೊಂಬೆಯಾಟಕ್ಕೆ ಸೇರಿದ ಇವರು ತಮ್ಮ ಸುಶ್ರಾವ್ಯ ಕಂಠದಿಂದ ಜನರನ್ನು ಆಕರ್ಷಿಸತೊಡಗಿದರು. ಗೊಂಬೆಯಾಟಕ್ಕಿಂತಲೂ ಮುಖ್ಯವಾಗಿ ಇವರ ಹಾಡು ಕೇಳಲೇ ಜನ ಮುತ್ತುತ್ತಿದ್ದರು.

ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟದಲ್ಲಿ ಭಾಗವತರಾಗಿರುವ ಇವರು ತಮ್ಮ ತಂಡದೊಂದಿಗೆ ಆಸ್ಟ್ರೇಲಿಯಾ, ಫ್ರಾನ್ಸ್, ಸ್ವಿಟ್ಜರ್‌ಲೆಂಡ್‌ಗಳಲ್ಲಿ ಕಾರ್ಯಕ್ರಮಗಳನ್ನು ನೀಡಿ ಅಲ್ಲಿಯ ಜನರ ಮನ ಸೂರೆಗೊಂಡಿದ್ದಾರೆ.

ಕೇಂದ್ರ ಶಿಕ್ಷಣ ಮತ್ತು ಸಂಸ್ಕೃತಿ ಇಲಾಖೆಯು ಇವರ ಪ್ರತಿಭೆಯನ್ನು ಗುರುತಿಸಿ ರಾಷ್ಟ್ರೀಯ ವಿದ್ಯಾರ್ಥಿ ವೇತನ ನೀಡಿ ಭಾಗವತಿಕೆಯಲ್ಲಿ ಇನ್ನಷ್ಟು ಪರಿಣತಿಗಳಿಸಲು, ಖ್ಯಾತ ಭಾಗವತರಾದ ಜಾನುವಾರುಕಟ್ಟೆಯವರ ಬಳಿ ತರಬೇತಿಯ ವ್ಯವಸ್ಥೆ ಮಾಡಿದೆ.

ಕಲಿಯುವ ಹುಮ್ಮಸ್ಸು, ನಿಷ್ಠೆ ತುಂಬಿರುವ ಶ್ಯಾನಭೋಗರು ಜಾನುವಾರುಕಟ್ಟೆಯವರ ಮಾರ್ಗದರ್ಶನದಲ್ಲಿ ಯಕ್ಷಗಾನ ರಂಗದಲ್ಲಿ ಮತ್ತೊಮ್ಮೆ 'ಕುಂಜಾಲು ಶೈಲಿ'ಯ ಭಾಗವತಿಕೆಯ ಕೀರ್ತಿ ಪತಾಕೆ ಹಾರಿಸಲಿ.

—ಮಾಚಯ್ಯ ಬಿಲ್ಲವ ದೊಂಬೆ

ಸತ್ವಯುತ ನಾಟಕ

'ಚೌಡಿಕುದುರು'

"ಧಾರ್ಮಿಕವಾಗಿ ಸಾಮಾಜಿಕವಾಗಿ ತನ್ನದೇ ಆದ ಕಟ್ಟು ಕಟ್ಟಳೆಗಳನ್ನು ಹೊಂದಿರುವ ಊರು ಚೌಡಿಕುದುರು. 'ಚೌಡಿ' ದೇವತೆಯು ಊರಿನವರ ಆರಾಧ್ಯ ದೇವಿ. ಚೌಡಿಯ ಮತ್ತು ಊರಿನ ನಿಯಮಗಳನ್ನು ಉಲ್ಲಂಘಿಸಿದವರು ಚೌಡಿಯ' ಕೋಪಕ್ಕೆ ಬಲಿಯಾಗುವುದು ಖಂಡಿತವೆಂದು ಅವರ ನಂಬಿಕೆ.

ಶೇಖರನ ತಾಯಿ ಸೀತು ಅಮಾವಾಸ್ಯೆಯ ರಾತ್ರಿಯಲ್ಲಿ ನೇಣು ಬಿಗಿದುಕೊಂಡು ಸತ್ತದ್ದೂ ಚೌಡಿಯ ಶಾಪದಿಂದಾಗಿ ಎಂದೇ ಪ್ರತೀತಿ. ತಾಯಿಯ ಸಾವಿನಲ್ಲಿ ಸಂಶಯವನ್ನು ತಾಳಿದ ಶೇಖರನು ಪೊಲೀಸ್ ಕೇಸ್ ಮಾಡಹೋಗಿ ಊರಿನಿಂದ ಬಹಿಷ್ಕರಿಸಲ್ಪಟ್ಟು ಕೊನೆಗೆ ಮೌನಿಯಾಗಿ ಚೌಡಿಯ ಗುಡಿಯ ಹತ್ತಿರವೇ ನಿರ್ಗತಿಕನಾಗಿ ಬಿದ್ದದ್ದೂ ಚೌಡಿಯ ಕೋಪದಿಂದಲೇ ಎಂದು ಊರಿನವರ ನಂಬಿಕೆ.

ಮಂಜುಗುರಿಕಾರನ ಮಗ ಪ್ರಕಾಶನ ಮಿತ್ರ ಆನಂದನು ಈ "ಅಮಾವಾಸ್ಯೆ ರಾತ್ರಿಯ" ರಹಸ್ಯವನ್ನು ಭೇದಿಸ ಹೊರಟಾಗ, ಮಧ್ಯ ರಾತ್ರಿ ಚೌಡಿಯ ಗುಡಿಯೊಳಗಿಂದ ಸ್ತ್ರೀಯೊಬ್ಬಳು ಓಡಿ ಹೋದದನ್ನು ಕಂಡು ಗುಡಿಯೊಳಗೆ ಪ್ರವೇಶ ಮಾಡಿದಾಗ ನೆತ್ತರು ಕಾರಿ ಸತ್ತು ಬೀಳುತ್ತಾನೆ. ಗುಡಿಯ ಅರ್ಚಕ ಶಾಸ್ತ್ರಿಗಳ ಬಾಯಿಯಿಂದ ಸತ್ಯ ಸಂಗತಿ ಹೊರಬೀಳುತ್ತದೆ. ಸೀತುವಿನ ಮತ್ತು ತನ್ನ ಹೆಂಡತಿಯ ಮಾನಭಂಗವನ್ನು ಈ ಗುಡಿಯೊಳಗೆ ಮಾಡಿದ ಊರಿನ ಮುಖ್ಯಸ್ಥ ಧರ್ಮರಾಜರೇ ಅವರಿಬ್ಬರ ಆತ್ಮಹತ್ಯೆಗೆ ಕಾರಣರೆಂದು ತಿಳಿಸಿದಾಗ ಊರ ಜನರು ಸ್ತಂಭೀಭೂತರಾಗುತ್ತಾರೆ.

ಊರಿನವರಿಗೆ ತನ್ನ ಅತ್ಯಾಚಾರವು ತಿಳಿಯಿತಲ್ಲಾ ಎಂದು ಕೊಂಡ ಧರ್ಮರಾಜರು ಗುಡಿಯೆದುರಿನಲ್ಲೇ ಹೃದಯಾಘಾತದಿಂದ ಸಾವನ್ನಪ್ಪುತ್ತಾರೆ.

ಇದು ಇತ್ತೀಚೆಗೆ ಮುಂಬಯಿಯ ಜೋಲಿ ಫ್ರೆಂಡ್ಸ್ ಸರ್ಕಲ್ ಇವರು ಮುಂಬ್ಯಾಯ ಖ್ಯಾತ ಸಂಗೀತ ನಿರ್ದೇಶಕ ಬಿ.ಎಂ. ವಸಂತರ ಗೌರವಾರ್ಥಕವಾಗಿ ಪ್ರದರ್ಶಿಸಿದ ಶ್ರೀನಾಥ್ ಮುಲ್ಕಿ ಇವರ ತುಳು ನಾಟಕ 'ಚೌಡಿಕುದುರು' ನಾಟಕದ ಕಥೆ.

ಧರ್ಮರಾಜರಾಗಿ ವಸಂತ ಕುಮಾರ್ ಕಾರ್ಕಳ್ ಅವರು, ಸಮರ್ಪಕವಾಗಿ ಅಭಿನಯಿಸಿದ್ದಾರೆ. ಪಾತ್ರದ ಪ್ರಾಮುಖ್ಯತೆಯನ್ನು ನೋಡುವಾಗ ಅವರಿಗೆ ಇನ್ನೂ ಉತ್ತಮವಾಗಿ ಅಭಿನಯಿಸುವ ಅವಕಾಶ ವಿತ್ತು. ಸುಂದರ ಮೂಡಬಿದ್ರಿ (ನಾಟಕದ ನಿರ್ದೇಶಕರೂ ಇವರೇ) ಯವರು ಜಾರಪ್ಪನ ಪಾತ್ರದಲ್ಲಿ ತಮ್ಮ ಅಭಿನಯ ಚಾತುರ್ಯದಿಂದ ನಾಟಕಕ್ಕೆ ಕಳೆಯೇರಿಸಿದ್ದಾರೆ

ಮಂಜುಗುರಿಕಾರನ ಪಾತ್ರದಲ್ಲಿ ವಿಜಯ ಶಿಂಗಳಾಯರು ಪ್ರೇಕ್ಷಕರ ಗಮನ ಸೆಳೆಯುತ್ತಾರೆ. ಪಾತ್ರಕ್ಕೆ ಸಮರ್ಪಕವಾದ ಸಾತ್ವಿಕತೆಯ ಮೂರ್ತಿಯಾಗಿ ಅವರ ಅಭಿನಯ ಅಮೋಘ. ವಾಮನ್ ಪೂಜಾರಿ ಪ್ರಕಾಶನಾಗಿ, ಕೃಷ್ಣಪ್ಪ ಸಾಲಿಯಾನ್ ಆನಂದನಾಗಿ ನಾಟಕದ ಯಶಸ್ವಿಗೆ ಪೂರಕವಾಗಿ ಅಭಿನಯಿಸಿದ್ದಾರೆ.

ಶೇಖರನ ಪಾತ್ರದಲ್ಲಿ ಶ್ರೀನಾಥ್ ಮುಲ್ಕಿಯವರು ಉತ್ತಮವಾಗಿ ಅಭಿನಯಿಸಿದ್ದರೂ. ಕೆಲವೊಂದು ಸನ್ನಿವೇಶದಲ್ಲಿ "ಬಿಗಿ"ಯನ್ನು ಸಡಿಲಗೊಳಿಸುತ್ತಿದ್ದರ ಮತ್ತೂ ಪರಿಣಾಮಕಾರಿಯಾಗುತ್ತಿತ್ತು. ಕೊಲೆಯ ರಹಸ್ಯವನ್ನು ಭೇದಿಸುವಾಗ ಶಂಕರ ಶಾಸ್ತ್ರಿ ಪಾತ್ರದ, ಎಂ.ಎಂ. ಕಾಮತರು ಗಾಂಭೀರ್ಯದೊಂದಿಗೆ 'ಗಡಸಾ'ಗುತ್ತಿದ್ದಾರೆ ಪ್ರೇಕ್ಷಕರ ಕುತೂಹಲ ಸಫಲವಾಗುತ್ತಿತ್ತು. ಇದರಿಂದಾಗಿ ಆ ಸನ್ನಿವೇಶ ಸ್ವಲ್ಪ ಸಪ್ಪೆಯಾಯಿತು. ಮಾನಭಂಗಗೊಳಿಸಲ್ಪಟ್ಟ ಶಂಕರ ಶಾಸ್ತ್ರಿಗಳ ಹೆಂಡತಿ (ಕು. ಅನಿತಾ) ಗುಡಿಯೊಳಗಿನಿಂದ ಹೆದರಿ ಓಡಿಹೋಗುವ ಸನ್ನಿವೇಶ ತುಂಬಾ ಸ್ವಜವಾಗಿ ಮೂಡಿ ಬಂದಿತ್ತು.

ಸುಂದರ ಮೂಡಬಿದ್ರಿಯವರ ಸಮರ್ಥ ನಿರ್ದೇಶನದಿಂದ ನಾಟಕ ಯಶಸ್ವಿಯಾಗಿದೆ. ಬಿ.ಎಂ. ವಸಂತರ ಸಂಗೀತ ಉತ್ತಮ. ಬೆಳಕು ಸಂಯೋಜನೆಯನ್ನು ಇನ್ನೂ ಉತ್ತಮ ಪಡಿಸಬಹುದಿತ್ತು.

ದೇವರ ಹೆಸರಿನಲ್ಲಿ ಹಳ್ಳಿಯ ಮುಗ್ಧ ಜನರು ಒಳಗಾಗುವ ಅತ್ಯಾಚಾರಗಳನ್ನು ಬಯಲಿಗೆಳೆಯುವ ಒಂದು ಸತ್ವಯುತ ನಾಟಕ "ಚೌಡಿಕುದುರು".

—ಜಿ.ಕೆ. ರಮೇಶ್ ಮುಂಬಯಿ

'ವಿವಾಹ ಬಂಧನ' ಚಿತ್ರದಲ್ಲಿ ಪ್ರಭಾಕರ್'